ಸಂಪುಟ 01 | ಸಂಚಿಕೆ 52 | ಶುಕ್ರವಾರ 02 ಜನವರಿ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

ಹಿಂದಿನ ವರ್ಷದ ಆಚರಣೆಯ ನಂತರದ ದಿನವನ್ನು ವಿಶ್ವ ಅಂತರ್ಮುಖಿ ದಿನವೆಂದು ಆಚರಿಸಲಾಗುತ್ತದೆ, ಇದು ಪ್ರಪಂಚದಾದ್ಯಂತದ ಹಲವಾರು ಅಂತರ್ಮುಖಿಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಅಂತರ್ಮುಖಿಗಳಿಗೆ ಅಗತ್ಯವಿರುವ ಸಮಯ ಮತ್ತು ಸ್ಥಳವನ್ನು ನೀಡುವಮೂಲಕಅವರನ್ನುಗೌರವಿಸಲು ಇದು ಸೂಕ್ತದಿನವಾಗಿದೆ.

**2)ರಾಷ್ಟ್ರೀಯ ವಿಜ್ಞಾನ ಕಾಲ್ಪನಿಕ ದಿನ National Science Fiction Day**

ರಾಷ್ಟ್ರೀಯ ವಿಜ್ಞಾನ ಕಾಲ್ಪನಿಕ ದಿನವನ್ನು ಪ್ರತಿ ವರ್ಷ ಜನವರಿ 2 ರಂದು ಆಚರಿಸಲಾಗುತ್ತದೆ, ಇದು ಪ್ರಸಿದ್ಧ ವಿಜ್ಞಾನ ಕಾದಂಬರಿ ಲೇಖಕ ಐಸಾಕ್ ಅಸಿಮೊವ್ ಅವರ ಜನ್ಮದಿನದ ನೆನಪಿನಲ್ಲಿ, ವಿಜ್ಞಾನ ಕಾದಂಬರಿಗಳನ್ನು ಓದುವ, ಚಲನಚಿತ್ರಗಳನ್ನು ನೋಡುವ ಮೂಲಕ ಆಚರಿಸಲಾಗುತ್ತದೆ; ರಾಷ್ಟ್ರೀಯ ವಿಜ್ಞಾನ ಕಾಲ್ಪನಿಕ ದಿನ ವಿಜ್ಞಾನ ಕಾದಂಬರಿಗಳನ್ನು ಓದುವುದು, ವೈಜ್ಞಾನಿಕ ಚಲನಚಿತ್ರಗಳನ್ನು ವೀಕ್ಷಿಸುವುದು.

## ಸುಭಾಷಿತ


ಹತ್ತು ಜನ ಸ್ನೇಹಿತರೊಂದಿಗೆ ಕುಳಿತುಕೊಂಡು ಒಬ್ಬರ
ಬಗ್ಗೆ ಕೆಟ್ಟದ್ದನ್ನು ಮಾತನಾಡುವುದಕ್ಕಿಂತ,
ಒಂಟಿಯಾಗಿ ಕುಳಿತು ಒಂದು ಪುಸ್ತಕವನ್ನು ಓದುವುದು
ಉತ್ತಮವಾದ ಕೆಲಸ.

ಡಾ. ಬಿ.ಆರ್.ಅಂಬೇಡ್ಕರ್

## ಉದ್ಬಾಳ ಗ್ರಾಮದ VSSN ಸೊಸೈಟಿಯ ಚುನಾವಣೆ ಯಲ್ಲಿ ಬಿಜೆಪಿ ಬೆಂಬಲಿತ 12 ಸದಸ್ಯರು ಆಯ್ಕೆ

❑ ನೈಜ್ಯ ದೇಸೆ ನ್ಯೂಸ್

ಬಳಗಾನೂರು: ಜ 01 ಬಳಗಾನೂರು ಪಟ್ಟಣದ ಸಮೀಪವಿರುವ ಉದ್ಬಾಳ ಗ್ರಾಮದ ಗಿಖಖಿಓ ಸೊಸೈಟಿಯ* ಚುನಾವಣೆ ಯಲ್ಲಿ ಬಿಜೆಪಿ ಬೆಂಬಲಿತ 12 ಸದಸ್ಯರು ಆಯ್ಕೆಯಾದ ಹಿನ್ನೆಲೆಯಲ್ಲಿ ನಗರದ *ಕೆ.ವಿ.ಶ್ರದ್ಧಾ ನಗರ ದ ಕಾರ್ಯಾಲಯದಲ್ಲಿ ನಮ್ಮ ನಾಯಕರು ಮಾಜಿ ಸಂಸದರಾದ ಶ್ರೀ ಕೆ.ವಿರೂಪಾಕ್ಷಪ್ಪ ನವರನ್ನು ಬೇಟಿಯಾಗಿ ಸನ್ಮಾನಿಸಿ ಆಶೀರ್ವಾದ ಪಡೆದುಕೊಂಡರು.



# ಜಾತಿ ಮಾಯವಾಗಿಲ್ಲ ಸ್ವರೂಪ ಬದಲು
# ಸಿಎಂ ಸಿದ್ದರಾಮಯ್ಯ

(ಕೇರಳ): ಭಾರತವು ಆರ್ಥಿಕ ಪ್ರಗತಿಯ ಬಗ್ಗೆ ಹೆಮ್ಮೆಪಡುತ್ತಿದೆ. ಆದರೆ, ಇಲ್ಲಿನ ಸಾಮಾಜಿಕ ಏಕತೆ ದುರ್ಬಲಗೊಳ್ಳುತ್ತಿರುವುದರಿಂದ ಸಾಮಾಜಿಕ ವಿಭಜನೆ ಹೆಚ್ಚುತ್ತಿದೆ. ಈ ಬೆಳವಣಿಗೆಗೆ ಸಮಾಜ ಸುಧಾರಕ ಶ್ರೀ ನಾರಾಯಣ ಗುರುಗಳ ತತ್ವಶಾಸ್ತ್ರವು ಪ್ರಬಲ ಉತ್ತರವಾಗಿದೆ ಎಂದು ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಹೇಳಿದ್ದಾರೆ.

ನಾರಾಯಣ ಗುರುಗಳು ಸ್ಥಾಪಿಸಿದ ಶಿವಗಿರಿ ಮಠದಲ್ಲಿ ನಡೆದ ಶಿವಗಿರಿ ತೀರ್ಥಯಾತ್ರೆಯ 93ನೇ ಮಹಾಸಮ್ಮೇಳನದಲ್ಲಿ ಮುಖ್ಯ ಅತಿಥಿಯಾಗಿದ್ದ ಸಿದ್ದರಾಮಯ್ಯ, ಬೆಂಗಳೂರಿನ ಕೋಗಿಲು ಲೇಔಟ್ ಬಳಿ ಅಕ್ರಮ ನಿವಾಸಿಗರ ಮನೆಗಳನ್ನು ಧ್ವಂಸಗೊಳಿಸಿದ್ದ ಕರ್ನಾಟಕದ ನಿಲುವನ್ನು ಖಂಡಿಸಿದ್ದ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಜತೆ ವೇದಿಕೆ ಹಂಚಿಕೊಂಡಿದ್ದು ವಿಶೇಷವಾಗಿತ್ತು. ಸಿದ್ದರಾಮಯ್ಯ ಭಾಷಣ ಪ್ರಾರಂಭವಾಗುವುದಕ್ಕೂ ಮುನ್ನವೇ ಪಿಣರಾಯಿ ವೇದಿಕೆ ತೊರೆದರಾದರೂ, ಸಿದ್ದರಾಮಯ್ಯ ಅವರಲ್ಲಿಗೆ ತೆರಳಿ, ತುರ್ತು ಕಾರಣದಿಂದ ವೇದಿಕೆಯಿಂದ ನಿರ್ಗಮಿಸುತ್ತಿರುವ ಬಗ್ಗೆ ತಿಳಿಸಿದರು ಎಂದು ಮೂಲಗಳು ತಿಳಿಸಿವೆ.

ಬಳಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಸಿದ್ದರಾಮಯ್ಯ, ಇಂದಿನ ಭಾರತಕ್ಕೆ ಒಂದು ವಿರೋಧಾಭಾಸ ಎದುರಾಗಿದೆ. ದೇಶದಲ್ಲಿ ಆರ್ಥಿಕ ಬೆಳವಣಿಗೆ, ಡಿಜಿಟಲ್ ವಿಸ್ತರಣೆ ಮತ್ತು ಜಾಗತಿಕ ಪ್ರಭಾವದ ಬಗ್ಗೆ ಮಾತನಾಡಲಾಗುತ್ತಿದೆ. ಆದರೆ, ದೇಶದೊಳಗಿನ ಸಾಮಾಜಿಕ ಒಗ್ಗಟ್ಟು ದುರ್ಬಲಗೊಳ್ಳುತ್ತಿದ್ದು, ದ್ವೇಷ ಸಾಮಾನ್ಯವಾಗುತ್ತಿದೆ' ಎಂದು ವಿಷಾದಿಸಿದರು. ಜಾತಿ ಮಾಯವಾಗಿಲ್ಲ, ಅದು ತನ್ನ ಸ್ವರೂಪವನ್ನು ಬದಲಿಸಿಕೊಂಡಿದೆ. ಕೋಮುವಾದವು ಈಗ ಶ್ರೇಣೀಕೃತ ವ್ಯವಸ್ಥೆಯ ಬಗ್ಗೆ ಬಹಿರಂಗವಾಗಿ ಮಾತನಾಡುವುದಿಲ್ಲ. ಅದು ಗುರುತು, ಭಯ ಮತ್ತು ಅಹಂಕಾರದ ಭಾಷೆಯಲ್ಲಿ ಮಾತನಾಡುತ್ತಿದೆ. ಕರುಣೆ ಮತ್ತು ನೈತಿಕತೆಯಿಂದ ಮತವು ದೂರಸರಿದಾಗ ದಬ್ಬಾಳಿಕೆಯ ಸಾಧನವಾಗುತ್ತದೆ ಎಂದು ಗುರುಗಳು ಅರ್ಥಮಾಡಿಕೊಂಡಿದ್ದರು.



ಧಾರ್ಮಿಕ ಬಹುಸಂಖ್ಯಾತವಾದ, ನ್ಯಾಯ ಮತ್ತು ಸಮಾನತೆಯಿಲ್ಲದ ಯಾವುದೇ ರಾಷ್ಟ್ರೀಯತೆ ಅಥವಾ ರಾಜಕೀಯವು ಮನುಕುಲಕ್ಕೆ ಶಾಪ. ಸಾಮಾಜಿಕ ನ್ಯಾಯವಿಲ್ಲದ ರಾಷ್ಟ್ರ ನಿರ್ಮಾಣವು ಕೇವಲ ಆಡಳಿತಾತ್ಮಕ ವ್ಯವಸ್ಥೆಯಾಗಲಿದೆಯೇ ಹೊರತು ಪ್ರಜಾಪ್ರಭುತ್ವವಾಗುವುದಿಲ್ಲ ಎಂಬುದಾಗಿ ಗುರುಗಳು ಎಚ್ಚರಿಸಿದ್ದರು ಎಂದು ಸಿದ್ದರಾಮಯ್ಯ ಹೇಳಿದರು. ಗಾಂಧೀಜಿ ಮತ್ತು ರವೀಂದ್ರನಾಥ್ ಠಾಗೋರ್ ಅವರ ಮೇಲೂ ಗುರುಗಳ ಪ್ರಭಾವವಿತ್ತು ಎಂದ ಸಿದ್ದರಾಮಯ್ಯ, ಅಸ್ಪೃಶ್ಯತೆ ವಿರೋಧ, ಸರಳ ಜೀವನ, ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡವುದನ್ನು ಗಾಂಧೀಜಿ ರೂಢಿಸಿಕೊಂಡರೆ, ರವೀಂದ್ರನಾಥ ಟ್ಯಾಗೋರ್ ಅವರ 'ವಿಶ್ವಮಾನವ' ಕಲ್ಪನೆಯು ಗುರುಗಳಿಂದ ಪ್ರೇರಿತವಾಗಿದೆ ಎಂದರು.

ಕೇರಳದಲ್ಲಿ ನೆಲೆಸಿದ್ದರೂ, ನಾರಾಯಣ ಗುರುಗಳ ಪ್ರಭಾವವು ಭಾಷೆ, ರಾಜ್ಯಗಳ ಗಡಿಗಳನ್ನು ಮೀರಿ ಕರ್ನಾಟಕದ ಕರಾವಳಿ, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಹಾಗೂ ಮಲೆನಾಡು ಭಾಗಗಳಲ್ಲಿ ಸುಧಾರಣಾ ಚಳವಳಿಗಳನ್ನು ರೂಪಿಸಿತು. ಬಿಲ್ಲವ, ಈಡಿಗ, ಮೊಗವೀರ ಮತ್ತು ಇತರ ಹಿಂದುಳಿದ ಸಮುದಾಯಗಳು ನಾರಾಯಣ ಗುರುಗಳ ಸ್ವಾಭಿಮಾನ, ಶಿಕ್ಷಣ ಮತ್ತು ಸಂಘಟನೆಯ ಕರೆಯಿಂದ ಸ್ಫೂರ್ತಿ ಪಡೆದವು. ಇದು ಈ ಪ್ರದೇಶದಲ್ಲಿ ಕೋಮು ಶಕ್ತಿಗಳ ವಿಭಜನೆಯ

> ಶಿವಗಿರಿ ಮಠವು ಕೇವಲ ಒಂದು ಯಾತ್ರಾ ಕೇಂದ್ರವಾಗಿರದೇ,ಭಾರತದ ಆತ್ಮಸಾಕ್ಷಿಯ ನೈತಿಕ ವಿಶ್ವವಿದ್ಯಾಲಯವಾಗಿದೆ. ಈ ಪವಿತ್ರ ಕ್ಷೇತ್ರದಲ್ಲಿ ನಿಮ್ಮ ಮುಂದೆ ನಿಂತಿರುವುದು ನನ್ನ ಸೌಭಾಗ್ಯ. ಇದು ಬೌದ್ಧಿಕ ಮತ್ತು ವಿಶ್ವದ ಮಾನವಕುಲದ ಚಳವಳಿಯಾಗಿದೆ. ಇದು ಭೌಗೋಳಿಕವಲ್ಲ, ನೈತಿಕತೆಯ ಪ್ರವಾಸ.
> –ಸಿದ್ದರಾಮಯ್ಯ, ಮುಖ್ಯಮಂತ್ರಿ

ಪ್ರಯತ್ನಗಳಿಗೆ ಬಲವಾದ ಪ್ರತಿರೋಧವನ್ನು ಒಡ್ಡಲು ಪ್ರಮುಖ ಕಾರಣವಾಯಿತು ಎಂದು ಸಿದ್ದರಾಮಯ್ಯ ಅಭಿಪ್ರಾಯಪಟ್ಟರು. ಬಸವಣ್ಣನವರ ಕಾಯಕ ತತ್ವವು ನಾರಾಯಣ ಗುರುಗಳ ಆರ್ಥಿಕ ಸ್ವಾವಲಂಬನೆಯ ಚಿಂತನೆಯಲ್ಲಿ ಪ್ರತಿಧ್ವನಿಸುತ್ತದೆ.

ಬಸವಣ್ಣನವರು ವಚನಗಳ ಮೂಲಕ ಭಕ್ತಿಯನ್ನು ಜನಸಾಮಾನ್ಯರ ಕೈಗೆ ನಿಲುಕುವಂತೆ ಮಾಡಿದರೆ, ನಾರಾಯಣ ಗುರುಗಳು ದೈವತ್ವವನ್ನೇ ಎಲ್ಲರಿಗೂ ಹಂಚುವ ಮೂಲಕ ಮನುಷ್ಯರು ಹುಟ್ಟಿನಿಂದ ಮೇಲುಕೀಳಲ್ಲ, ಅಸ್ತಿತ್ವದಿಂದ ಸಮಾನರು ಎಂದು ಸಾರಿದರು ಎಂದು ಹೊಗಳಿದರು. ನಾರಾಯಣ ಗುರುಗಳನ್ನು ಗೌರವಿಸಲು ಹಾಗೂ ಸ್ಮರಿಸಲು ಕರ್ನಾಟಕ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ನೀಡಿದ ಸಿದ್ದರಾಮಯ್ಯ, ಶಿವಗಿರಿ ತೀರ್ಥಯಾತ್ರೆಯು ವಾರ್ಷಿಕ ಆಚರಣೆಯಾಗಿಯಷ್ಟೇ ಉಳಿಯಬಾರದು, ಬದಲಾಗಿ ನಿರಂತರ ಸಾಮಾಜಿಕ ಚಳವಳಿಯಾಗಬೇಕು ಎಂದು ಕರೆ ನೀಡಿದರು. ಅಲ್ಲದೆ, ಧಾರ್ಮಿಕ ಮುಖಂಡರು ದ್ವೇಷದ ವಿರುದ್ಧ ದನಿಯೆತ್ತಬೇಕು, ಗುರುಗಳ ತತ್ವವು ಶಾಲೆಗಳನ್ನು ತಲುಪಬೇಕು ಯುವಜನರು ಅನ್ಯಾಯವನ್ನು ಪ್ರಶ್ನಿಸಬೇಕು ಎಂದು ಸಿದ್ದರಾಮಯ್ಯ ಆಶಿಸಿದರು.

## ಸಹನಾ ಶಾಲೆಯಲ್ಲಿ ಹೊಸ ವರ್ಷ ಸಂಭ್ರಮ.

❑ ನೈಜ್ಯ ದೇಸೆ ನ್ಯೂಸ್

ಲಿಂಗಸಗೂರು: ಲಿಂಗಸಗೂರು ತಾಲೂಕಿನ ಮುದಗಲ್ ಪಟ್ಟಣದ ಕಿಲ್ಲದಲ್ಲಿರುವ ಸಹನಾ ಶಾಲೆಯಲ್ಲಿ ಇಂದು ಹೊಸ ವರ್ಷವನ್ನು ಆಚರಿಸಲಾಯಿತು. ಕಾರ್ಯಕ್ರಮವನ್ನು ಕೇಕ್ ಕತ್ತರಿಸುವುದರ ಮೂಲಕ ಚಾಲನೆ ನೀಡಲಾಯಿತು.



ಕಾರ್ಯಕ್ರಮದ ಕುರಿತು ಸಂಸ್ಥೆಯ ಅಧ್ಯಕ್ಷರು ಶ್ರೀಮತಿ ಇರ್ಫಾನಾ ಬೇಗಂ ಮಾತನಾಡಿ, ಪ್ರತಿ ಮಕ್ಕಳು ತಂದೆ-ತಾಯಿಯನ್ನು ಗೌರವಿಸಬೇಕು ಮತ್ತು ಪ್ರತಿಯೊಬ್ಬರು ತಂದೆ ತಾಯಿ ಮತ್ತು ಶಿಕ್ಷಕರ ಮಾತನ್ನು ತಪ್ಪದೇ ಪಾಲಿಸಬೇಕು ಎಂದು ಮಕ್ಕಳಿಗೆ ಕರೆ ನೀಡಿದರು. ಕಾರ್ಯಕ್ರಮದಲ್ಲಿ ಲೈಬಾ, ಸಿಂಚನ, ಸಹನ, ಉಮೇರಾ, ಅಲಿಯ ಮತ್ತು ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕಿರಾದ ಪ್ರಿಯಾಂಕ, ಹೀನಾ ಬೇಗಮ್, ಕವಿತಾ ಮಾತನಾಡಿದರು.

ಶಾಲೆಯ ಮುಖ್ಯ ಗುರುಗಳಾದ ಆದಪ್ಪ ಅವರು ಮಾತನಾಡಿ, ನಮ್ಮ ಶಾಲೆಯಲ್ಲಿ ಕಲಿಯುವಂತಹ ಮಕ್ಕಳು ಅತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ಸು ಪಡೆಯುತ್ತಿದ್ದಾರೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕಿಯರಾದ ಆಯಿಷಾ ಬೇಗಮ್, ನಿಲು ಬಾಯಿ, ಕಾವೇರಿ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶಾಲೆಯ ಶಿಕ್ಷಕಿಯಾದ ಅಸ್ಮಾ ಬೇಗಂ ನಿರೂಪಿಸಿದರು. ಕಾರ್ಯಕ್ರಮದ ನಂತರದಲ್ಲಿ ಮಕ್ಕಳಿಂದ ಸಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

## ವರ್ಷದ ಮೊದಲ ದಿನ ಮಂತ್ರಾಲಯಕ್ಕೆ ಭಕ್ತಸಾಗರ

❑ ನೈಜ್ಯ ದೇಸೆ ನ್ಯೂಸ್

ರಾಯಚೂರು: ಗುರು ರಾಯರ ವಾರ ಗುರುವಾರವೇ ವರ್ಷದ ಮೊದಲ ದಿನ ಬಂದ ಪ್ರಯುಕ್ತ ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ಮಠಕ್ಕೆ ಭಾರಿ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದಾರೆ. ಮಠದ ಆವರಣ ಸಾವಿರಾರು ಸಂಖ್ಯೆಯ ಭಕ್ತರಿಂದ ತುಂಬಿಕೊಂಡಿದೆ.

ಬೆಳಗಿನ ಜಾವ ಐದು ಗಂಟೆಯಿಂದಲೇ ರಾಯರ ವೃಂದಾವನ ದರ್ಶನಕ್ಕೆ ಅನುವು ಮಾಡಿಕೊಡಲಾಗಿತ್ತು. ಮಠದೊಳಗೆ ಬರಲು ಎಲ್ಲ ದ್ವಾರಗಳ ಮೂಲಕ ಅವಕಾಶ ಕಲ್ಪಿಸಲಾಗಿತ್ತು. ಬಹುತೇಕ ಭಕ್ತರು ಕುಟುಂಬದ ಸದಸ್ಯರೊಂದಿಗೆ ಮಂತ್ರಾಲಯಕ್ಕೆ ಬಂದು



ಸರತಿ ಸಾಲಿನಲ್ಲಿ ನಿಂತು ರಾಯರ ದರ್ಶನ ಪಡೆದರು. ಹೊಸ ವರ್ಷ ಶುಭವನ್ನೇ ತರಲಿ ಎಂದು ಪ್ರಾರ್ಥನೆ ಸಲ್ಲಿಸಿದರು. ಬೆಂಗಳೂರು, ಮೈಸೂರು, ಶಿವಮೊಗ್ಗ ಹಾಗೂ ದಾವಣಗೆರೆಯಿಂದ ಬಂದಿದ್ದ ಭಕ್ತರಿಗೆ ಮಠದ ಕೊಠಡಿ ಲಭ್ಯವಾಗದೇ ತೊಂದರೆ ಅನುಭವಿಸಿದರು. ಕಿಕ್ಕಿರಿದ ಭಕ್ತರಿಂದಾಗಿ ಪ್ರಸಾದ ವಿತರಣೆ ವ್ಯವಸ್ಥೆಯಲ್ಲಿ ವ್ಯತ್ಯಯವಾಯಿತು.

**ದೇವಾನಂಪ್ರಿಯ ಅಶೋಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ "ಮಸ್ಕಿ ಪರಿಸರ :ಪುರಾತತ್ವ,ಇತಿಹಾಸ, ಸಂಸ್ಕೃತಿ" ರಾಜ್ಯ ಮಟ್ಟದ ವಿಚಾರ ಸಂಕಿರಣ**

## ವಿವಿಧ ಆಯಾಮಗಳಿಂದ ಇತಿಹಾಸ ಗುರುತಿಸಬೇಕು-ಪ್ರೊ. ಶಿವಾನಂದ ಕೆಳಗಿನಮನಿ

❑ ನೈಜ್ಯ ದೇಸೆ ನ್ಯೂಸ್

ಮಸ್ಕಿ: ಇತಿಹಾಸವನ್ನು ನೋಡುವ ಕ್ರಮ ಬದಲಾಗಿ,ಇತಿಹಾಸವನ್ನು ವಿವಿಧ ಆಯಾಮಗಳಿಂದ ಅಧ್ಯಯನ ಮಾಡಬೇಕು, ಮಸ್ಕಿಯಲ್ಲಿ ಇವುಗಳಿಗೆ ಸಂಬಂಧಿಸಿದ ಎಲ್ಲಾ ಯುಗಗಳ ಐತಿಹಾಸಿಕ ಆಕರಗಳಿವೆ ಎಂದು ಪ್ರೊ.ಶಿವಾನಂದ ಕೆಳಗಿನಮನಿ ಹೇಳಿದರು.

ಪಟ್ಟಣದ ದೇವಾನಂಪ್ರಿಯ ಅಶೋಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ರಾಯಚೂರು,ಇವರ ಸಹಯೋಗದಲ್ಲಿ "ಮಸ್ಕಿ ಪರಿಸರ : ಪುರಾತತ್ವ,ಇತಿಹಾಸ ಮತ್ತು ಸಂಸ್ಕೃತಿ" ಎಂಬ ವಿಷಯದ ಕುರಿತು ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಮಾತನಾಡಿ, ಇಲ್ಲಿಯ ಬೆಟ್ಟಗಳಲ್ಲಿ ನಾಗರಿಕ,ಸಾಂಸ್ಕೃತಿಕ ಕುರುಹುಗಳು ಯಥೇಚ್ಛ ಪ್ರಮಾಣದಲ್ಲಿ ದೊರಕಿವೆ,ವಿವಿಧ ಧಾರ್ಮಿಕ ಪಂಥಗಳಾದ ಬೌದ್ಧ,ಜೈನ,ವೈಷ್ಣವ,ವೀರಶೈವ,ಸಿದ್ಧ,ನಾಥ,ಯೋಗಿ, ಜೋಗಿ,ತಾಣಗಳು ಕಂಡು ಬರುತ್ತವೆ ಎಂದರು.



ಕರ್ನಾಟಕ ಇತಿಹಾಸ ಅಕಾಡೆಮಿ ಅಧ್ಯಕ್ಷ ಡಾ.ದೇವರಕೊಂಡಾರೆಡ್ಡಿ ಯವರು ಮಾತನಾಡಿ,ಈ ಸ್ಥಳವು ಐತಿಹಾಸಿಕ ಮಹತ್ವದ ಸ್ಥಾನ ಪಡೆದುಕೊಂಡಿದ್ದು,ಇಲ್ಲಿನ ಅಶೋಕನ ಶಾಸನಗಳಿಂದ ಮಸ್ಕಿಯು ಭಾರತೀಯ ಇತಿಹಾಸದಲ್ಲಿ ಅಷ್ಟೇ ಅಲ್ಲದೆ ಪ್ರಪಂಚದ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದಿದೆ ಎಂದರು. ಡಾ.ರಮೇಶ ನಾಯಕ ಕನ್ನಡ ವಿಶ್ವವಿದ್ಯಾಲಯ,ಹಂಪಿ ಇತಿಹಾಸ ಮುಖ್ಯಸ್ಥರು ಇವರು" ಮಸ್ಕಿ ಪರಿಸರದ ಪ್ರಾಗ್ಯೈತಿಹಾಸಿಕ" ಕುರಿತು ವಿಷಯ ಮಾತನಾಡಿ, ಸುಮಾರು 3500 ವರ್ಷಗಳ ಹಿಂದೆ ಬೃಹತ್ ಶಿಲಾಯುಗ ಸಂಸ್ಕೃತಿ ಕಾಲದಲ್ಲಿ ಕಬ್ಬಿಣ ಬಳಕೆಯಿಂದ ಕೃಷಿ ವಿಕಸನಗೊಂಡು,ವ್ಯಾಪಾರ ಅಧಿಕವಾಗಿ ರೋಮ್,ಗ್ರೀಕ್ ನೊಂದಿಗೆ ವ್ಯಾಪಾರ ಸಂಪರ್ಕಗಳು ಬೆಳೆದವು.

ಇಲ್ಲಿನ ಮಡಿಕೆಗಳ ಮೇಲೆ ರೋಮ್ ನ ಪ್ರಭಾವ ಕಾಣಬಹುದು ಇಲ್ಲಿನ ಕೆಲವು ಕುರುಹುಗಳು ಸಿಂಧೂ ನಾಗರಿಕತೆಯೊಂದಿಗೆ ಸಾಮ್ಯತೆ ಹೊಂದಿವೆ ಎಂದರು. ಡಾ.ಎಲ್.ಪಿ.ಮಾರುತಿ, ಕರ್ನಾಟಕ ವಿಶ್ವವಿದ್ಯಾಲಯ,ಧಾರವಾಡ ಇವರು "ಮಸ್ಕಿ ಪರಿಸರದ ಇತಿಹಾಸ ಮತ್ತು ಸಂಸ್ಕೃತಿ" ಬಗ್ಗೆ ವಿಷಯ ಮಂಡನೆ ಮಾಡಿ ಇಲ್ಲಿನ ಹೊಸ ವಿಚಾರಗಳ ಬಗ್ಗೆ ಬೆಳಕು ಚೆಲ್ಲಿದರು. ಡಾ.ಮಹಾಂತಗೌಡ ಪಾಟೀಲ್ ರವರು ಮಾತನಾಡಿ "ವಿಶ್ವವಿದ್ಯಾನಿಲಯದ ನಡೆ ವಿದ್ಯಾರ್ಥಿಗಳ ಕಡೆಗೆ" ಎಂಬ ವಿನೂತನ ಕಾರ್ಯಕ್ರಮ ಮೊದಲ ಬಾರಿಗೆ ನಮ್ಮ ಕಾಲೇಜ್ ನ್ನು ಆಯ್ಕೆ ಮಾಡಿಕೊಂಡಿದ್ದಕ್ಕೆ ಧನ್ಯವಾದ ಹೇಳಿ, ವಿದ್ಯಾರ್ಥಿಗಳಿಗೆ ಹಾಗೂ ಇತಿಹಾಸ ಆಸಕ್ತರಿಗೆ ಜ್ಞಾನದ ಉಪಯುಕ್ತವಾದ ಮಾಹಿತಿ ನೀಡುವ ಯಾವುದೇ ಕಾರ್ಯಕ್ರಮಗಳು ಮಾಡುವುದಾದರೆ ಅದಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ ಎಂದರು.

ಈ ವೇಳೆ, ಡಾ.ಕೆ.ವೆಂಕಟೇಶ್ ಮುಖ್ಯಸ್ಥರು,ಇತಿಹಾಸ ವಿಭಾಗ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು, ಶ್ರೀನಿವಾಸ ಯಾಳಗಿ, ಸಣ್ಣಪ್ಪ ನಾಯಕ, ಡಾ.ಪರಮಾನಂದ ಹಂಗರಗಿ,ಶಿವಶರಣಪ್ಪ ಇತ್ಲಿ, ಡಾ.ಮಂಜುನಾಥ ಕೆ ಆಶಾ.ಸಿ,ಸಣ್ಣಪ್ಪ ನಾಯಕ, ರೋಹಿಣಿ ಮೂರ್ತಿ,ಡಾ.ರಾಮಣ್ಣ ಎ. ಜುಮ್ಮಾ,ಬಸವರಾಜ ತಡಕಲ್, ಶಿವಗ್ಯಾನಪ್ಪ ಎ.ಲಕ್ಕುಂದಿ, ಹಾಜಿಬಾಬಾ, ಡಾ.ಪರಮಾನಂದ ಹಂಗರಗಿಹಾಗೆ ಸೇರಿದಂತೆ ವಿವಿಧ ವಿಶ್ವವಿದ್ಯಾಲಯಗಳ ಇತಿಹಾಸ ತಜ್ಞರು, ಪ್ರಾಧ್ಯಾಪಕರು, ಮುಖ್ಯಸ್ಥರು, ವಿದ್ಯಾರ್ಥಿಗಳು, ಇತಿಹಾಸ ಆಸಕ್ತರು ಇದ್ದರು.

## ಸಾಹಿತ್ಯ ಸಿಂಚನ

ನವವರ್ಷದ ನಿವೇದನೆ.!

ಮೂಡಣದ ಬಾನಂಗಳದಿಂದ ಮೂಡುವ
ಹೊಸವರ್ಷದ ಪ್ರಪ್ರಥಮ ತೇಜೋಕಿರಣ
ನೀಡಲಿ ಬಾಳಿನಂಗಳಕೆ ನವ ಹೊಂಗಿರಣ
ಬೆಳಗಿ ಬೆಳಕಾಗಿಸಲಿ ತನುಮನದ ಕಣಕಣ.!

ಮುಗಿದವರ್ಷದ ಬಿಕ್ಕು ಬೇಗುದಿ ಕಳೆಯುತ
ಹೊಸ ಹಾದಿ ಹೊಸ ದಿಕ್ಕುಗಳ ತೋರಲಿ
ನೊಂದಮನದ ದುಃಖ ದಣಿವು ತೊಳೆಯುತ
ಹೊಸಹುಮ್ಮಸ್ಸು ಹೊಸ ಹುರುಪು ಬೀರಲಿ.!

ನರಳಿಕೆ ನೋವುಗಳ ಜಾಡ್ಯ ತೊಡೆಯುತ
ಹೊಸ ಕಾರುಣ್ಯ ಹೊಸ ಚೈತನ್ಯ ಸ್ಫುರಿಸಲಿ
ನಿರಾಸೆ ಖಿನ್ನತೆಗಳ ಜಡತೆ ಕಡೆಯಾಗಿಸುತ
ಹೊಸ ತೇಜಸ್ಸು ಹೊಸ ಓಜಸ್ಸು ಹರಿಸಲಿ.!

ಭ್ರಮೆ ವೇದನೆ ರೋಧನೆಗಳ ದೂರಾಗಿಸುತ
ಹೊಸ ಸಾಧನೆ ಹೊಸ ಗಮ್ಯದತ್ತ ನಡೆಸಲಿ
ಅಸೂಯೆ ಆತ್ಮರತಿ ಮೌಢ್ಯಗಳ ನಿವಾರಿಸುತ
ಅರಿವು ಅಧ್ಯಾತ್ಮ ಆರಾಧನೆಗಳ ಸಾಕ್ಷಿಕರಿಸಲಿ.!

ಹೊಸವರ್ಷದಿ ದಿಗ್ದಿಗಂತ ಬೆಳಗಿಹ ಭಾಸ್ಕರ
ಹೊಸ ಕನಸು ಹೊಸ ನಂಬಿಕೆ ಪ್ರಜ್ವಲಿಸಲಿ
ಹೊಸ ಕಾಂತಿಯಲಿ ಹೊಳೆಯುತಿಹ ದಿನಕರ
ಹೊಸಬೆಳಕು ಹೊಸ ಭರವಸೆಗಳ ಪಸರಿಸಲಿ,!

ಅಂಬರದಿಂದ ಅನಂತವಾಗಿಳಿದಿಹ ರವಿಕಿರಣ
ಹೊಸಸಂಭ್ರಮ ಹೊಸಸಂತಸ ಅನುರಣಿಸಲಿ
ಹೊಸ ವರ್ಷದ ಹರ್ಷ ಅನುದಿನ ಅನುಕ್ಷಣ
ಹೊಸಒಳಿತು ಹೊಸಒಲುಮೆಗಳ ರಿಂಗಣಿಸಲಿ.!

ಬದುಕಿಗೆ ಹೊಸ ವರ್ಷವೆಂದರೆ ನವೋಲ್ಲಾಸ
ನವೋತ್ಸಾಹಗಳ ನವನವೀನ ಭಾವೋತ್ಕರ್ಷ.!
ಹೊಸವರ್ಷದ ಮೊದಲದಿನವೆಂದರೆ ನವಸಂಕಲ್ಪ
ನವಕಾಯಕಲ್ಪಗಳ ನಿತ್ಯನೂತನ ಜೀವನಿಷ್ಕರ್ಷ.!

ಎ.ಎನ್.ರಮೇಶ್.ಗುಬ್ಬಿ.

## ಡಿ.ಇ.ಐ.ಸಿ. ವ್ಯವಸ್ಥಾಪಕರ ಹುದ್ದೆಗೆ ಅರ್ಜಿ ಆಹ್ವಾನ

ನೈಜ್ಯ ದೇಸೆ ನ್ಯೂಸ್

ರಾಯಚೂರು: ಜನವರಿ 01 (ಕರ್ನಾಟಕ ವಾರ್ತೆ): ಇಲ್ಲಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ 2025-26ನೇ ಸಾಲಿಗೆ ಮಂಜೂರಾಗಿ ಖಾಲಿ ಇರುವ ಡಿ.ಇ.ಐ.ಸಿ. ವ್ಯವಸ್ಥಾಪಕರು-01 ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ರಾಷ್ಟ್ರೀಯ ಆರೋಗ್ಯ ಅಭಿಯಾನದ ಮಾರ್ಗಸೂಚಿ ಹಾಗೂ ಷರತ್ತು ಮತ್ತು ನಿಬಂಧನೆಗಳಿಗೆ ಅನುಸಾರ ಹಾಗೂ ಈ ಹುದ್ದೆ ಜಿಲ್ಲೆಗೆ ಒಂದೇ ಇರುವುದರಿಂದ ಮೇರಿಟ್ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುವುದು. ವಿದ್ಯಾರ್ಹತೆ: ಭಾರತೀಯ ಪುನರ್ವಸತಿ ಮಂಡಳಿ ಅನುಮೋದಿಸಿದ ಅಂಗವೈಕಲ್ಯ ಪುನರ್ವಸತಿ ಆಡಳಿತದಲ್ಲಿ ಸ್ನಾತಕೋತ್ತರ ಪದವಿ ಅಥವಾ ಮಾನ್ಯತೆ ಪಡೆದ / ಪ್ರಸಿದ್ಧ ಸಂಸ್ಥೆಯಿಂದ ಆಸ್ಪತ್ರೆ/ ಆಸ್ಪತ್ರೆ ನಿರ್ವಹಣೆಯಲ್ಲಿ ಸ್ನಾತಕೋತ್ತರ ಪದವಿ/ ಡಿಪ್ಲೋಮಾ ಹೊಂದಿರುವವರಿಗೆ 1 ವರ್ಷದ ಅನುಭವ ಹೊಂದಿರಬೇಕು. ಅಥವಾ ಮಾನ್ಯತೆ ಪಡೆದ ಸಂಸ್ಥೆಯಿಂದ ಎಂ.ಬಿ.ಎ. ಆಸ್ಪತ್ರೆ ನಿರ್ವಹಣೆ/ ಆಡಳಿತ ಪದವಿ ಮತ್ತು ಆಸ್ಪತ್ರೆ/ ಆರೋಗ್ಯ ಕಾರ್ಯಕ್ರಮದಲ್ಲಿ 2 ವರ್ಷಗಳ ಅನುಭವವಿರಬೇಕು. ಹಾಗೂ ರಾಷ್ಟ್ರೀಯ ಆರೋಗ್ಯ ಅಭಿಯಾನ ಹಾಗೂ ಆರೋಗ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸಿದ ಅನುಭವ ಹೊಂದಿದ್ದಲ್ಲಿ ಎಂ.ಬಿ.ಎ.ಪದವಿಯನ್ನು ಪರಿಗಣಿಸಲಾಗುವುದು. ಆಸಕ್ತರು ಜನವರಿ 5ರ 10.30ಗಂಟೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಚೇರಿಯಲ್ಲಿ ನಡೆಯುವ ನೇರ ಸಂದರ್ಶನದಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಲಯ ರಾಯಚೂರು ಅನ್ನು ಕಚೇರಿಯ ಅವಧಿಯಲ್ಲಿ ಭೇಟಿ ನೀಡಿ ಮಾಹಿತಿ ಪಡೆಯಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಮರ ಶಿಲ್ಪಿ ಜಕಣಾಚಾರಿ ಜಯಂತಿ ಆಚರಣೆ

ನೈಜ್ಯ ದೇಸೆ ನ್ಯೂಸ್




ಮಾನ್ವಿ: ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ತಾಲೂಕು ಆಡಳಿತ ಹಾಗೂ ವಿಶ್ವಕರ್ಮ ಸಮುದಾಯದ ವತಿಯಿಂದ ಅಮರ ಶಿಲ್ಪಿ ಜಕಣಾಚಾರಿ ಜಯಂತಿಯ ಅಂಗವಾಗಿ ಅಮರ ಶಿಲ್ಪಿ ಜಕಣಾಚಾರಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ತಹಸೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ಮಾತನಾಡಿ ನಮ್ಮ ನಾಡಿನ ಹೆಸರಂತ ಶಿಲ್ಪ ಕಲೆಗಳ ನೆಲೆವೀಡಾಗಿರುವ ಬೇಲುರು ಹಾಗೂ ಹಳೆ ಬೀಡುಗಳಲ್ಲಿನ ಭವ್ಯವಾದ ಸುಂದರ, ದೇವಸ್ಥಾನಗಳಲ್ಲಿ ಅಮರ ಶಿಲ್ಪಿ ಜಕಣಾಚಾರಿಯವರ ಅದ್ಬುತ ಕಲೆಯನ್ನು ನಾವು ಕಣಬಹುದಾಗಿದೆ.

ವಿಶ್ವಕರ್ಮ ಸಮುದಾಯದವರು ತಮ್ಮ ಪಂಚಕಲೆಗಳಿ0ದ ಜನರಿಗೆ ಅಗತ್ಯವಾದ ಸಲಕರಣೆಗಳನ್ನು ಹಾಗೂ ಸುಂದರವಾದ ಮೂರ್ತಿಗಳನ್ನು ನೀಡುತ್ತ ಬಂದಿದ್ದಾರೆ ವಿಶ್ವಕರ್ಮ ಸಮುದಾಯದವರು ತಮ್ಮ ಪರಂಪರಿಕವಾದ ಕಲೆಯಜೋತೆಗೆ ತಮ್ಮ ಮಕ್ಕಳಿಗೆ ಉತ್ತಮವಾದ ಶಿಕ್ಷಣವನ್ನು ನೀಡುವಂತೆ ಕರೆ ನೀಡಿದರು. ಕಾರ್ಯಕ್ರಮದಲ್ಲಿ ವಿಶ್ವಕರ್ಮ ಸಮುದಾಯದ ಸಾಧಕರಾದ ದೇವರಾಜ ಆಚಾರ್ ಶಿಲ್ಪಿ ಸಂಗಪುರ, ಕಾಳಪ್ಪಚಾರ್ ಬಡಿಗೇರ ಮಾನ್ವಿ, ಅಯ್ಯಪ್ಪ ವಿಶ್ವಕರ್ಮ, ಶಿವಪ್ಪಚಾರ್ ವಿಶ್ವಕರ್ಮ, ಜಿ.ಸಿ, ಅಂಬ0ಣ್ಣಚಾರ್ ರವರನ್ನು ತಾಲೂಕು ಆಡಳಿತವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಗ್ರೇಡ್-2 ತಹಸೀಲ್ದಾರ್ ಅಬ್ದುಲ್ ವಾಹಿದ್, ಗುಮ್ಮ ಬಸವರಾಜ, ವಿಶ್ವಕರ್ಮ ಸಮುದಾಯದ ಮುಖಂಡರಾದ ಮನೋಹರ್ ವಿಶ್ವಕರ್ಮ ವಕೀಲರು,ಮೋಹನಾಚಾರಿ, ವೀರೇಶಚಾರಿ, ಮೌನೇಶಚಾರಿ ಹಾಲ್ವಿ, ಸತೀಶ ಆಚಾರಿ, ಷಣ್ಮುಖಚಾರಿ, ಮಹೇಶಚಾರಿ, ಗವಿಯಪ್ಪಾಚಾರಿ, ಶ್ರೀಶೈಲಮಾಸ್ಟರ್,ಪಂಡುರ0ಗ ವಿಶ್ವಕರ್ಮ, ಧನುಂಜಯ್ಯ ಆಚಾರಿ,ಗದ್ವಲ ವೇಂಕಟೇಶ,ಸೇರಿದ0ತೆ ವಿವಿಧ ಇಲಾಖೆಯ ಅಧಿಕಾರಿಗಳು ಭಾಗವಹಿಸಿದರು.

# ಉದ್ಯೋಗ ಮೇಳ ಯಶಸ್ವಿಗೆ ಸಿದ್ಧತೆ ಮಾಡಿಕೊಳ್ಳಿ



ನೈಜ್ಯ ದೇಸೆ ನ್ಯೂಸ್

ರಾಯಚೂರು: ಜಿಲ್ಲೆಯ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲು ಉದ್ಯೋಗ ಮೇಳ ಆಯೋಜಿಸಲಾಗಿದ್ದು, ಉದ್ಯೋಗ ಮೇಳಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು' ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾ ನಿರ್ದೇಶಕ ಶರಣಬಸವರಾಜ ಅಧಿಕಾರಿಗಳಿಗೆ ಸೂಚಿಸಿದರು. ನಗರದ ಜಿಲ್ಲಾ ಪಂಚಾಯಿತಿ ಜಲ ನಿರ್ಮಲ ಸಭಾಂಗಣದಲ್ಲಿ ಉದ್ಯೋಗ ಮೇಳದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಂಜೀವಿನಿ-ಕೆ.ಎಸ್.ಆರ್.ಎಲ್.ಪಿ.ಎಸ್, ಡಿಡಿಯು-ಜಿಕೆ ಯೋಜನೆಯಡಿ ಉದ್ಯೋಗ ಮೇಳ ಆಯೋಜಿಸಬೇಕಾಗಿದೆ. ಉದ್ಯೋಗ ಮೇಳದ ಅವಧಿಯಲ್ಲಿ ಉದ್ಯೋಗದಾತ ಸುಮಾರು 75 ಸಂಸ್ಥೆಗಳನ್ನು ಆಹ್ವಾನಿಸಬೇಕು. ಮೇಳದಲ್ಲಿ ಕನಿಷ್ಠ 1500 ಜನ ಅಭ್ಯರ್ಥಿಗಳಿಗೆ ಉದ್ಯೋಗವಕಾಶವನ್ನು ಕಡ್ಡಾಯವಾಗಿ ಕಲ್ಪಿಸುವ ಗುರಿಯನ್ನು ನಿಗಧಿಪಡಿಸಬೇಕು' ಎಂದು ಹೇಳಿದರು. 'ಮೇಳದ ಎಲ್ಲಾ ಚಟುವಟಿಕೆಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡುವ ಮೂಲಕ ವ್ಯಾಪಕ ಪ್ರಚಾರ ಕೈಗೊಳ್ಳಬೇಕು' ಎಂದರು. ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಜನವರಿಯಲ್ಲಿ ನಡೆಸಲಾಗುವುದು. ಮೇಳದಲ್ಲಿ ಎಸ್‌ಎಸ್-ಎಲ್‌ಸಿಯಿಂದ ಮೊದಲುಗೊಂಡು ಪಿಯುಸಿ, ಸಾಮಾನ್ಯ ಪದವಿ, ಡಿಪ್ಲೊಮಾ, ಐಟಿಐ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ಕೋರ್ಸ್ ಕಲಿತವರಿಗೆ ಉದ್ಯೋಗಾವಕಾಶ ಕಲ್ಪಿಸಲು ವೇದಿಕೆ ಸಜ್ಜುಗೊಳಿಸಲಾಗಿದೆ' ಎಂದು ತಿಳಿಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ 75 ಉದ್ಯೋಗದಾತರು (ಕಂಪೆನಿಗಳು) ಭಾಗವಹಿಸಲಿದ್ದು, ಆಸಕ್ತ ಅಭ್ಯರ್ಥಿಗಳು ನೋಂದಣಿ ಮಾಡಿಕೊಳ್ಳಬೇಕು. ಮೇಳದಲ್ಲಿ ಆಯ್ಕೆಯಾದವರಿಗೆ ಸ್ಥಳದಲ್ಲಿಯೇ ಆಫರ್ ಲೆಟರ್ ಕೊಡಲಿದ್ದಾರೆ' ಎಂದು ತಿಳಿಸಿದರು. ಜಿಲ್ಲಾ ಪಂಚಾಯಿತಿ ಮುಖ್ಯ ಲೆಕ್ಕಧಿಕಾರಿ ವಿಜಯಶಂಕರ, ಸಿಡಾಕ್ ಜಂಟಿ ನಿರ್ದೇಶಕ ಜಿ.ಯು.ಹುಡೇದ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸೋಮಶೇಖರಪ್ಪ ಹೊಕ್ರಾಣಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಉಪ ನಿರ್ದೇಶಕ ರಾಜಕುಮಾರ ಪಾಟೀಲ, ಜಿಲ್ಲಾ ಉದ್ಯೋಗಾಧಿಕಾರಿ ನವೀನ್ ಕುಮಾರ, ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕೆ ಸಂಘದ ಕಾರ್ಯದರ್ಶಿ ಜಂಬಣ್ಣ, ವಿವಿಧ ಕಾಲೇಜುಗಳ ಪ್ರಾಚಾರ್ಯರು, ಉಪನ್ಯಾಸಕರು ಸಭೆಯಲ್ಲಿ ಹಾಜರಿದ್ದರು.

# ಭೀಮಾ ಕೋರೆಗಾಂವ್ ವಿಜಯೋತ್ಸವದ ಪಥ ಸಂಚಲನ

ನೈಜ್ಯ ದೇಸೆ ನ್ಯೂಸ್



ಲಿಂಗಸಗೂರು: ಜ. 2 ಶತಮಾನಗಳ ಸಿಟ್ಟನ್ನು ಸಿಡಿಮದ್ದಾಗಿ ಸಿಕೊಂಡು ಸಿದ್ದು ನಾಕಾ ನೇತೃತ್ವದಲ್ಲಿ ಯುದ್ಧ ಗೆದ್ದ ಭೀಮಾ ಕೋರೆಗಾಂವ್ ಯುದ್ಧವೀರರನ್ನು ನೆನೆಯುವುದಕ್ಕಾಗಿ ಜ.1ರಂದು ಪಟ್ಟಣದಲ್ಲಿ ಜೈ ಭೀಮ್ ರೆಜಿಮೆಂಟ್ ನಿಂದ ವಿಜಯೋತ್ಸವದ ಪಥ ಸಂಚಲನಕ್ಕೆ ಚಾಲನೆ ನೀಡಿ ಮಾತನಾಡಿದ ವಿಜಯೋತ್ಸವ ಸಮಿತಿ ಅಧ್ಯಕ್ಷ ಆರ್. ಮಾನಸಯ್ಯ ಶತ ಶತಮಾನಗಳ ಸಿಟ್ಟನ್ನು ಸಿಡಿಮದ್ದಾಗಿಸಿಕೊಂಡು ಸಿದ್ದುನಾಕಾ ನೇತೃತ್ವದಲ್ಲಿ ಯುದ್ಧ ಗೆದ್ದ ಭೀಮ ಕೋರೆಗಾಂವ್ ಯುದ್ಧವೀರರನ್ನು ನೆನೆಯದೆ ಹೋದರೆ ಚರಿತ್ರೆ ಕ್ಷಮಿಸದು.

ಜಾತಿ ಅಸ್ಪೃಶ್ಯತೆ ದಮನ ದಬ್ಬಾಳಿಕೆಯಿಂದ ಕುದಿಯುತ್ತಿದ್ದ ಮಹಾರರು, ಮರಾಠವಾಡದ ಬ್ರಾಹ್ಮಣವಾದಿ ಪೇಳ್ವೆಗಳನ್ನು ಮಣ್ಣು ಮುಕ್ಕಿಸಿ ಅಧಿಕಾರದಿಂದ ತೊಲಗಿಸಿದ ವಿರೋಚಿತ ಇತಿಹಾಸವಿದೆ. ಜಾತಿವಾದ, ಅಸ್ಪೃಶ್ಯತೆ ಹಾಗೂ ಸಕಲ ತಾರತಮ್ಯಗಳ ವಿರುದ್ದ ನಡೆದ ಯುದ್ಧವಾಗಿದೆ. ಈ ಯುದ್ಧದಿಂದ ಮತ್ತು ಇದರ ವಿಜಯದಿಂದ ಈ ನಾಡಿನ ದಲಿತರು ವರ್ತಮಾನದ ಜಾತಿ ವಿನಾಶ, ವರ್ಗವಿನಾಶ, ಸರ್ವ ತಾರತಮ್ಯ ವಿನಾಶಗಳ ಹೋರಾಟಕ್ಕೆ ಮಹಾನ್ ಪ್ರೇರಣೆಯಾಗಿದೆ ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ದಾನಪ್ಪ ಮಸ್ಕಿ, ಹೆಚ್.ಎನ್. ಬಡಿಗೇರ, ದೊಡ್ಡಪ್ಪ ಮುರಾರಿ, ಹೆಚ್ .ಬಿ.ಮುರಾರಿ, ಪಾಮಯ್ಯ ಮುರಾರಿ, ನಿಂಗಪ್ಪ ಪರಂಗಿ, ಪ್ರಭುಲಿಂಗ ಮೇಗಳಮನಿ, ಶರಣಪ್ಪ ಹುನಕುಂಟಿ, ಸಂಜೀವ ಚಲುವಾದಿ, ಆದೇಶ ನಗನೂರು, ಪರಶುರಾಮ ನಗನೂರು, ಶಿವಪ್ಪ ಮಾಚನೂರು, ಬಸವರಾಜ ಬಡಿಗೇರ, ಚಿದಾನಂದ ಚಲುವಾದಿ, ದುರಗಪ್ಪ ಅಗ್ರಹಾರ, ರಮೇಶ ಗೋಲ್ಡ್, ಡಿ.ಜಿ. ಶಿವು, ಗುಂಡಪ್ಪ ಯರಡೋಣಾ ಸೇರಿ ನೂರಾರು ಕಾರ್ಯಕರ್ತರು ಇದ್ದರು.

# ಕಾಲುವೆಯಲ್ಲಿ ಮುಳುಗಿ ಇಬ್ಬರು ರೈತ ಮಹಿಳೆಯರು ಸಾವು





ನೈಜ್ಯ ದೇಸೆ ನ್ಯೂಸ್

ರಾಯಚೂರು: ಜ.01: ಕೈಕಾಲು ತೊಳೆದುಕೊಳ್ಳಲು ಹೋಗಿ ಕಾಲುವೆಯಲ್ಲಿ6ಬಿದ್ದು ಇಬ್ಬರು ಮಹಿಳೆಯರು (Accident) ಸಾವನ್ನಪ್ಪಿರುವ ಘಟನೆ ರಾಯಚೂರಿನ (Raichur news) ಲಿಂಗಸುಗೂರು ತಾಲೂಕಿನ ಆನೆ ಹೊಸೂರು ಬಳಿ ನಡೆದಿದೆ. ಮಸ್ಕಿ ತಾಲೂಕಿನ ನಂಜಲದಿನ್ನಿ ಗ್ರಾಮದ ಈರಮ್ಮ (35) ಮತ್ತು ದೇವಮ್ಮ (30) ಮೃತರು. ನಾರಾಯಣಪುರ ಬಲದಂಡೆ ಕಾಲುವೆಯಲ್ಲಿ ಕಾಲು ಜಾರಿ ಬಿದ್ದು ಇಬ್ಬರೂ ಮೃತಪಟ್ಟಿದ್ದಾರೆ.

ಗದ್ದೆಯಲಿ ಕೆಲಸ ಮುಗಿಸಿಕೊಂಡು ಮನೆಗೆ ಮರಳುವಾಗ ದುರ್ಘಟನೆ ಸಂಭವಿಸಿದೆ. ಕೂಲಿ ಕೆಲಸ ಮುಗಿಸಿ ಕೈಕಾಲು ತೊಳೆದುಕೊಂಡು ಮನೆಗೆ ಹೋಗಲು ಕಾಲುವೆ ಬಳಿ ಬಂದಿದ್ದರು. ಲಿಂಗಸುಗೂರು ಠಾಣೆ ಪೊಲೀಸರು ಹಾಗೂ ಅಗ್ನಿಶಾಮಕ ದಳ ಸಿಬ್ಬಂದಿ ಶೋಧ ಕಾರ್ಯ ನಡೆಸಿ ಮಹಿಳೆಯರ ಶವ ಹೊರತೆಗೆದಿದ್ದಾರೆ. ಸದ್ಯ ಇಬ್ಬರು ಮಹಿಳೆಯರ ಮೃತದೇಹವನ್ನು ಲಿಂಗಸುಗೂರು ತಾಲೂಕಾಸ್ಪತ್ರೆ ಶವಾಗಾರಕ್ಕೆ ರವಾನಿಸಲಾಗಿದೆ. ಘಟನೆ ಸಂಬಂಧ ಲಿಂಗಸುಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಂದೆತಾಯಿ ಬೇರೆಯಾಗಿದ್ದಕ್ಕೆ ಮನನೊಂದು ಬಾಲಕಿ ಆತ್ಮಹತ್ಯೆ

ಬೆಂಗಳೂರು: ತಂದೆ-ತಾಯಿ (Father-Mother) ಬೇರೆಯಾಗಿದ್ದಕ್ಕೆ ಮನನೊಂದು ಬಾಲಕಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೆಂಗಳೂರಿನಲ್ಲಿ (Bengaluru) ನಡೆದಿದೆ.

ಲೇಖನಾ (17) ಆತ್ಮಹತ್ಯೆಗೆ ಶರಣಾದ ಬಾಲಕಿ. ಲೇಖನಾ 10ನೇ ತರಗತಿ ಅನುತ್ತೀರ್ಣ ಆಗಿ ಮನೆಯಲ್ಲಿಯೇ ಇದ್ದಳು. ತಂದೆ-ತಾಯಿ ಕೌಟುಂಬಿಕ ಕಲಹದಿಂದ ಇತ್ತೀಚಿಗೆ ದೂರವಾಗಿದ್ದರು. ತಂದೆ ಬೇರೆ ಕಡೆ ವಾಸವಿದ್ದರೆ, ಲೇಖನಾ ತಾಯಿ ಜೊತೆಗೆ ವಾಸವಿದ್ದರು. ನನಗೆ ತಂದೆ-ತಾಯಿ ಪ್ರೀತಿ ಸಿಗುತ್ತಿಲ್ಲ. ನಾನು ಒಂಟಿ ಎಂಬ ಭಾವನೆ ಕಾಡುತ್ತಿದೆ. ನನ್ನ ಸಾವಿಗೆ ನಾನೇ ಕಾರಣ ಎಂದು ಡೆತ್ ನೋಟ್ ಬರೆದು ಬುಧವಾರ ರಾತ್ರಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಸದ್ಯ ಮೃತದೇಹವನ್ನು ಕಿಮ್ಸ್ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಲಾಗಿದೆ. ಘಟನೆ ಸಂಬಂಧ ಸಿ.ಕೆ ಅಚ್ಚುಕಟ್ಟು ಪೊಲೀಸ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದೆ.

# ಭಾವೈಕ್ಯತೆಬೆಳೆಸುವ ಭಾರತ್ ಸೇವಾದಳ-ಮಹಿಬೂಬ್ ಮದ್ಲಾಪುರ ಸೇವಾದಳ ಸಪ್ತಾಹ ಕಾರ್ಯಕ್ರಮ

ನೈಜ್ಯ ದೇಸೆ ನ್ಯೂಸ್




ಮಾನ್ವಿ: ಮಕ್ಕಳು ಯುವ ಸಮುದಾಯ ಶಿಕ್ಷಕರು ಹಾಗೂ ಜನಸಾಮಾನ್ಯರಿಗೆ ರಾಷ್ಟ್ರೀಯ ಭಾವೈಕ್ಯತೆ ರಾಷ್ಟ್ರ ಪ್ರೇಮ ಬೆಳೆಸುವುದೇ ಭಾರತ ಸೇವಾದಳದ ಮೂಲ ಉದ್ದೇಶವಾಗಿದೆ ಎಂದು ಭಾರತ ಸೇವಾದಳ ವಿಭಾಗ ಸಂಘಟಖರಾದ ವಿದ್ಯಾಸಾಗರ್ ಚಿಣಮಗೇರಿ ಹೇಳಿದರು.

ಭಾರತ ಸೇವಾದಳ ಜಿಲ್ಲಾ ಸಮಿತಿ ರೈಚೂರು ಶಾಲಾ ಶಿಕ್ಷಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಸರ್ಕಾರಿ ಪ್ರೌಢಶಾಲೆ ಕೋನಾಪುರಪೇಟ್ ಸೇವಾದಳ ಅಮೃತ ಮಹೋತ್ಸವ ಅಂಗವಾಗಿ ಸೇವಾದಳ ಸಪ್ತಾಹ ಆಚರಣೆ ದೇಶಭಕ್ತಿ ಗೀತೆಗಳ ಭಾಗವಹಿಸಿ ವಿಜೇತರಾದವರಿಗೆ ಪ್ರಶಸ್ತಿ ಪತ್ರವಹಿತರಿಸಿ ವಹಿಸಿ ಮಾತನಾಡಿದರು ಭಾರತ ಸೇವಾದಳ ಮುಂಚೆ ಹಿಂದೂಸ್ತಾನಿ ಸೇವಾದಳ ಎಂದು 1923 ಡಿಸೆಂಬರ್ 28 ರಲ್ಲಿ ಪಂಡಿತ್ ಜವಾಹರ್ ಲಾಲ್ ನೆಹರು ಅವರು ಪ್ರಥಮ ಅಧ್ಯಕ್ಷರಾಗಿ, ಡಾ. ಎನ್ ಎಸ್ ಹರಡಿಕರ್ ಅವರು ಸಂಚಾಲಕರಾಗಿದ್ದರು ಸ್ವಾತಂತ್ರ್ಯ ನಂತರ 1950 ಮಾರ್ಚ್ 16ರಂದು ಹಾಸನ ಜಿಲ್ಲೆ ಬೇಲೂರಿನಲ್ಲಿ ಭಾರತ ಸೇವಾದಳ ಎಂದು ಮರುನಾಮಕರಣ ಮಾಡಲಾಯಿತು ಎಂದು ಹೇಳಿದರು ಭಾರತ್ ಸೇವಾ ದಳ ಪ್ರಸ್ತುತ ರಾಜ್ಯ ಶಾಲಾ ಶಿಕ್ಷಣ ಇಲಾಖೆ ಅನುದಾನಿತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

ಭಾರತ್ ಸೇವಾದಳ ತಾಲೂಕ ಕಾರ್ಯದರ್ಶಿ ಹಾಗೂ ಸಂಪನ್ಮೂಲ ವ್ಯಕ್ತಿಯಾದ ಡಾ. ಮಹಿಬೂಬ್ ಮದ್ಲಾಪುರ ಮಾತನಾಡುತ್ತಾ ಇಂದಿನ ಯುವ ಜನಾಂಗ ಯಾವುದೇ ದುಶ್ಚಟಗಳಿಗೆ ಬಲಿಯಾಗದೆ ಉತ್ತಮ ಆರೋಗ್ಯವನ್ನು ಕಾಪಾಡಿಕೊಂಡು ದೇಶ ಸೇವೆಗೆ ಮುಂದಾಗಬೇಕೆಂದು ದೇಶಕ್ಕಾಗಿ ಪ್ರಾಣ ಕೊಡಲು ಸಿದ್ಧರಿರಬೇಕು ನಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಟದ ಇತಿಹಾಸ ಓದಿ, ಧರ್ಮ, ಜಾತಿ, ಮತಗಳ ಇದ್ದರು ನಮ್ಮಲ್ಲಿ ಐಕ್ಯತೆ ಭಾವೈಕ್ಯತೆ ಇದ್ದು ಪಾಲಿಸಬೇಕು. ಎಂದು ಹೇಳಿದರು. ಯೋಗ ಗುರು ಹಾಗೂ ದೈಹಿಕ ಶಿಕ್ಷಣ ಶಿಕ್ಷಕ ಮೌನೇಶ್ ಪೋತ್ನಾಳ್ ಮಾತನಾಡುತ್ತಾ "ಮಕ್ಕಳು ಯುವಕರು ಏಕಾಗ್ರತೆ ಬರಲು ಆರೋಗ್ಯ ಕಾಪಾಡಿಕೊಳ್ಳಲು ಪ್ರತಿನಿತ್ಯ ಯೋಗ ಧ್ಯಾನ ಪ್ರಾಣಾಯಾಮಮಾಡಬೇಕೆಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಶಾಲೆಯ ಮುಖ್ಯೋಪಾಧ್ಯಾಯ ವಿರುಪಾಕ್ಷಪ್ಪ ಮಾತನಾಡುತ್ತಾ "ಗಾಂಧಿ ಟೋಪಿ ಹಾಕುವುದರಿಂದ ಸ್ವತಃ ಆತ್ಮ ಸ್ಥೈರ್ಯ, ಸ್ವಾಭಿಮಾನ, ದೇಶ ಪ್ರೇಮ, ನಿಷ್ಠೆ, ದೇಶಭಕ್ತಿ ಬೆಳೆಯುತ್ತದೆ ಅಂದು ಸ್ವತಂತ್ರ ಹೋರಾಟಗಾರರು ಗಾಂಧಿ ಟೋಪಿಯನ್ನು ಹಾಕಿಕೊಳ್ಳುತ್ತಿದ್ದರು ಅವರಿಗೆ ಪೂಜ್ಯ ಮನೋಭಾವನೆಯಿಂದ ನೋಡುತ್ತಿದ್ದರು ಆದ್ದರಿಂದ ಭಾರತ ಸೇವಾದಳ ಸ್ವತಂತ್ರಕ್ಕಾಗಿ ಹೋರಾಡಿದ ಸಂಸ್ಥೆ ನಾವೆಲ್ಲರೂ ಹೆಮ್ಮೆಯಿಂದ ಈ ಚಟುವಟಿಕೆಯಲ್ಲಿ ಭಾಗವಹಿಸೋಣ ಎಂದು ಹೇಳಿದರು ಕಾರ್ಯಕ್ರಮದಲ್ಲಿ ಶಿಕ್ಷಕರಾದ ಸಂಜೀವಪ್ಪ ಅವರು ಶಾಲೆಯಲ್ಲಿ ಇಂಥ ಕಾರ್ಯಕ್ರಮ ಹಮ್ಮಿಕೊಳ್ಳುವುದರಿಂದ ಮಕ್ಕಳಲ್ಲಿ ದೇಶಪ್ರೇಮ ಬೆಳೆಯುತ್ತದೆ ಎಂದು ಹೇಳಿದರು ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ದೇಶಭಕ್ತಿ ದೇಶ ಸ್ಪರ್ಧೆಯಲ್ಲಿ ತ್ರಿಶಾ ಪ್ರಥಮ, ಸಿಮ್ರಾನ್ ದ್ವಿತೀಯ, ನಂದಿನಿ ದ್ವಿತೀಯ ಸ್ಥಾನದಿಂದ ಪ್ರಶಸ್ತಿ ಪತ್ರ ಪಡೆದುಕೊಂಡರು.

## ನೇಮಕಾತಿ ಪ್ರಕಟಣೆ

ಆದಾಯ ತೆರಿಗೆ ಇಲಾಖೆ ನೇಮಕಾತಿ 2026 – 3 ಯುವ ವೃತ್ತಿಪರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ ಆದಾಯ ತೆರಿಗೆ ಇಲಾಖೆ ನೇಮಕಾತಿ 2026: 3 ಯುವ ವೃತ್ತಿಪರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಆದಾಯ ತೆರಿಗೆ ಇಲಾಖೆ ಡಿಸೆಂಬರ್ 2025 ರ ಅಧಿಕೃತ ಅಧಿಸೂಚನೆಯ ಮೂಲಕ ಯುವ ವೃತ್ತಿಪರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ – ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 08–ಜನವರಿ–2026 ರಂದು ಅಥವಾ ಮೊದಲು ಇಮೇಲ್ ಕಳುಹಿಸಬಹುದು. ಅಧಿಸೂಚನೆ ಬಿಡುಗಡೆಯಾದ ದಿನಾಂಕ: 30–12–2025 ಇ–ಮೇಲ್ ಕಳುಹಿಸಲು ಕೊನೆಯ ದಿನಾಂಕ: 08–ಜನವರಿ–2026 ಅಧಿಕೃತ ವೆಬ್‌ಸೈಟ್: incometax-mumbai.gov.in ಕೊನೆಯ ದಿನಾಂಕ: 08–ಜನವರಿ–2026

## ಸಹಾಯಧನಕ್ಕೆ ಅರ್ಜಿ ಸಲ್ಲಿಸಲು ಜನವರಿ 9ರವರೆಗೆ ಅವಧಿ ವಿಸ್ತರಣೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜನವರಿ 01 (ಕರ್ನಾಟಕ ವಾರ್ತೆ): ರಾಜ್ಯಾದ್ಯಂತ ಹಾಗೂ ಹೊರರಾಜ್ಯಗಳಲ್ಲಿ ಕ್ರಿಯಾತ್ಮಕ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ನಾಡಿನ ಭಾಷಾ ಸಂವರ್ಧನೆ, ಕಲೆ, ಸಾಹಿತ್ಯ, ಸಂಗೀತ, ಜಾನಪದ, ನೃತ್ಯ ಕಲಾಪ್ರಕಾರಗಳನ್ನು ಉಳಿಸಿ ಬೆಳೆಸುವ ಸಲುವಾಗಿ ಕಾರ್ಯನಿರ್ವಹಿಸುತ್ತಿರುವ ನೋಂದಾಯಿತ ಸಂಘ–ಸಂಸ್ಥೆಗಳಿಂದ ಸಹಾಯಧನಕ್ಕೆ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿಯ ಅವಧಿಯನ್ನು ಜನವರಿ 9ರವರೆಗೆ ವಿಸ್ತರಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.**

ಕಲಾವಿದರಿಗೆ ವಾದ್ಯ ಪರಿಕರ ಮತ್ತು ವೇಷಭೂಷಣಗಳ ಖರೀದಿಗೆ ಸಹಾಯಧನ ಹಾಗೂ ಚಿತ್ರಕಲೆ,ಶಿಲ್ಪ ಕಲಾಕೃತಿಗಳ ಪ್ರದರ್ಶನಕ್ಕೆ ಸಹಾಯಧನ ನೀಡಲು 2025–26ನೇ ಸಾಲಿನ ಸಾಮಾನ್ಯ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಉಪಯೋಜನೆಯಡಿ ಸೇವಾಸಿಂಧು ವಿಳಾಸ: Sevasindhu.karnataka.gov.in. ನಲ್ಲಿ ಜನವರಿ 9ರವರೆಗೆ ಅರ್ಜಿ ಸಲ್ಲಿಸಲು ಕಾಲಾವಾಕಾಶ ನೀಡಲಾಗಿದೆ. ನಿಗದಿತ ದಿನಾಂಕದ ನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹಾಗೂ ಅರ್ಜಿಗಳನ್ನು ನೇರವಾಗಿ ಇಲಾಖೆಯಲ್ಲಿ ಸ್ವೀಕರಿಸುವುದಿಲ್ಲ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಕಲಚೇತನರಿಂದ ವಿವಿಧ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜನವರಿ 01 (ಕರ್ನಾಟಕ ವಾರ್ತೆ): ರಾಯಚೂರು ಮಹಾನಗರಪಾಲಿಕೆ ವ್ಯಾಪ್ತಿ ಪ್ರದೇಶದಲ್ಲಿ ಬರುವ ವಿಕಲಚೇತನರ ಅರ್ಹ ಫಲಾನುಭವಿಗಳಿಂದ ವಿವಿಧ ಸೌಲಭ್ಯಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.**

ಆಸಕ್ತರು ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ವೈದ್ಯರಿಂದ ಪಡೆದ ಗುರುತಿನ ಚೀಟಿ/ಯು.ಡಿ.ಐ.ಡಿ ಕಾರ್ಡ, ಆದ–ಾರ ಕಾರ್ಡ, ಬಿ.ಪಿ.ಎಲ್ ರೇಷನ್ ಕಾರ್ಡ, ಗುರುತಿನ ಚೀಟಿ, ಪಾಸ್ ಫೋಟೋ ಸೈಜ್ ಫೋಟೋ–1, ವಿಕಲಚೇತನರ 1 ಭಾವಚಿತ್ರದೊಂದಿಗೆ ಜನವರಿ 15 ರೊಳಗಾಗಿ ಕಚೇರಿಗೆ ಸಲ್ಲಿಸಬಹುದಾಗಿದೆ.

## ವಿಶೇಷ ಮಧ್ಯಸ್ಥಿಕೆ 2.0 ಅಭಿಯಾನ ಇಂದಿನಿಂದ ಪ್ರಾರಂಭ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜನವರಿ 01 (ಕರ್ನಾಟಕ ವಾರ್ತೆ): ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ದೇಶದ ಎಲ್ಲಾ ನ್ಯಾಯಾಲಯಗಳಲ್ಲಿ ಬಾಕಿ ಇರುವ ಮಧ್ಯಸ್ಥಿಕೆ ಮೂಲಕ ರಾಜಿ ಆಗಬಹುದಾದ ಪ್ರಕರಣಗಳ ಕುರಿತು ವಿಶೇಷ ಮಧ್ಯಸ್ಥಿಕೆಯ ಅಭಿಯಾನ 2.0 ಅನ್ನು ಜನವರಿ 2ರಿಂದ 90ದಿನಗಳ ಕಾಲ ಆಯೋಜಿಸಲಾಗಿದ್ದು, ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಮಧ್ಯಸ್ಥಿಕೆಯ ಅಭಿಯಾನ ಜರುಗಲಿದೆ.**

ರಾಜಿ ಆಗಬಹುದಾದ ಪ್ರಕರಣಗಳನ್ನು ಮಧ್ಯಸ್ಥಿಕೆ ಕೇಂದ್ರಗಳಿಗೆ ಕಳುಹಿಸಿ ಅಲ್ಲಿ ವಿಶೇಷ ತರಬೇತಿ ಹೊಂದಿದ ಮಧ್ಯಸ್ಥಿಕೆಗಾರರಿಂದ ರಾಜಿ ಸಂಧಾನ ಮಾಡಿಸುವ ವ್ಯವಸ್ಥೆ ಇದಾಗಿದೆ ಎಂದು ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಎಚ್.ಎ. ಸಾತ್ವಿಕ್ ಅವರು ತಿಳಿಸಿದ್ದಾರೆ. ಕಕ್ಷಿದಾರರು ಈ ಅಭಿಯಾನದ ಸದುಪಯೋಗ ಪಡೆದುಕೊಳ್ಳಬೇಕು. ಮಾಹಿತಿಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಥ–ವಾ ಜಿಲ್ಲೆಯ ತಾಲ್ಲೂಕು ಕಾನೂನು ಸೇವಾ ಸಮಿತಿಗಳಾದ ಸಿಂಧನೂರು, ಲಿಂಗಸೂಗೂರು, ಮಾನವಿ, ದೇವದುರ್ಗ ಕಚೇ–ರಿಗಳನ್ನು ಸಂಪರ್ಕಿಸಬಹುದು ಎಂದು ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಿಂಧನೂರು ಶ್ರೀ ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಸತ್ಯ ಗಾರ್ಡನ್ ಹತ್ತಿರದ ರೈಲ್ವೆ ಸ್ಟೇಷನ್ ರಸ್ತೆಯ ಶ್ರೀ ಅಮರ ಶಿಲ್ಪಿ ಜಕಣಾಚಾರಿ ವೃತ್ತದಲ್ಲಿ ವಿಶ್ವಕರ್ಮ ಸಮಾಜದ ವತಿಯಿಂದ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಆಚರಿಸಲಾಯಿತು.**

ಇದೇ ಸಂಧರ್ಭದಲ್ಲಿ ಶ್ರೀ ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ವೃತ್ತಕ್ಕೆ ಗಣ್ಯವ್ಯಕ್ತಿಗಳಿಂದ ವಿಶೇಷ ಪೂಜೆ ಪುಷ್ಪರ್ಚನೆ ಮಾಡಲಾಯಿತು. ಇದೇವೇಳೆ ಸಂಗೀತ ಕ್ಷೇತ್ರದಲ್ಲಿ 1984ರಲ್ಲಿ ರಾಜ್ಯ ಪ್ರಶಸ್ತಿ ಪುರಸ್ಕೃತರಾದ ಚಿದಾನಂದಪ್ಪ ಕೂಡಲಸಂಗಮ ಅವರು ಶ್ರೀ ವಿಶ್ವಕರ್ಮ ದಿನದರ್ಶಿಕೆ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು. ಈ ಸಂಧರ್ಭದಲ್ಲಿ ವಿಶ್ವಕರ್ಮ ಸಮಾಜದ ತಾಲೂಕ ಅಧ್ಯಕ್ಷ ಮೌನೇಶ ತಿಡಿಗೋಳ,ಮಾಜಿ



ಅಧ್ಯಕ್ಷ ವೀರಭದ್ರಪ್ಪ ಹಂಚಿನಾಳ,ಉಪಾಧ್ಯಕ್ಷ ಅಂಬಣ್ಣ ಗೊರೇಬಾಳ,ಶ್ರೀ ಕಾಳಿಕಾದೇವಿ ಟ್ರಸ್ಟ್ ಅಧ್ಯಕ್ಷ ಮಂಜುನಾಥ ಕೊಟ್ನೆಕಲ್, ಕರ್ಪೆಂಟರ್ ಸಂಘದ ಅಧ್ಯಕ್ಷ ರವೀಂದ್ರ ಗದ್ರಟಗಿ,ಗುರುಮೂರ್ತಿ ಕಂಚುಗಾರ, ಮಾನಪ್ಪ ವಾಸ್ತು ಅಲಬಾನೂರು, ದೇವಣ್ಣ ಬಡಿಗೇರ, ಗಣೇಶ ಪತ್ತಾರ, ಮೌನೇಶ PWD, ಶರಣಪ್ಪ ಪತ್ತಾರ ಸೋಮಲಾಪುರ, ಬಸವರಾಜ ಕಮತಗಿ, ಶ್ರವಣಕುಮಾರ, ರಾಜು ಬಳಗಾನೂರು,ವಿರೇಶ ಬಡಿಗೇರ, ಶಿವು ಬಡಿಗೇರ,ಕಾಶೀಪತಿ ಜವಳಗೇರಾ, ಮಂಜುನಾಥ್ ಉಪ್ಪಲದೊಡ್ಡಿ, ಗುಂಡಪ್ಪ ದೇವರಗುಡಿ, ಅಮರೇಶ ದೇವರಗುಡಿ, ದೇವರಾಜ ಗೊರೇಬಾಳ, ಸಂದೀಪ್, ಷಣ್ಮುಖಪ್ಪ ಪತ್ತಾರ ವೀರಭದ್ರಿ ಅಲಬನೂರು, ಚನ್ನಪ್ಪ ಕೆ.ಹೊಸಹಳ್ಳಿ, ರಮೇಶ ಪಗಡದಿನ್ನಿ, ಜಯಾಚಾರಿ, ಡಾ.ವೀರೇಶ, ಡಾ.ಬಸವರಾಜ,ನರಸಪ್ಪ ಆಚಾ–ರಿ,ಮೌನೇಶ ಪತ್ತಾರ,ರವಿ ಬಳಗಾನೂರ,ವಿ–ಜಯಚಂದ್ರ, ರಾಮು ಹಾಗೂ ವಿಶ್ವಕರ್ಮ ಸಮಾಜದ ವಿವಿಧ ಹೋಬಳಿಗಳ ಮುಖಂಡರು, ತಾಲೂಕ ವಿಶ್ವಕರ್ಮ ಸಮಾಜದ ಪಧಾಧಿಕಾ–ರಿಗಳು, ಶ್ರೀ ಕಾಳಿಕಾದೇವಿ ದೇವಸ್ಥಾನ ಟ್ರಸ್ಟ್ ಪಧಾಧಿಕಾರಿಗಳು, ಕರ್ಪೆಂಟರ್ ಸಂಘದ ಪಧಾಧಿಕಾರಿಗಳು ಹಾಗೂ ಇನ್ನಿತರ ಹಿರಿಯ ಹಾಗೂ ಯುವ ಮುಖಂಡರು ಇದ್ದರು.

# ಯದ್ದಲದಿನ್ನಿ: ಹೊಸ ವರ್ಷ ಆರಂಭದಲ್ಲಿ ದುಷ್ಕರ್ಮಿಗಳಿಂದ ಬೈಕಿಗೆ ಬೆಂಕಿ ಸುಟ್ಟು ಕರಕಲು



ನೈಜ್ಯ ದೆಸೆ ನ್ಯೂಸ್

**ಹಾಲಾಪೂರ: ಗ್ರಾಮ ಪಂಚಾಯತಿಯ ಯದ್ದಲದಿನ್ನಿ ಗ್ರಾಮದಲ್ಲಿ ಹೊಸ ವರ್ಷದ ಸ್ವಾಗತ ಸಂಭ್ರಮ ಸಡಗರ ಮಧ್ಯೆ ದುಷ್ಕರ್ಮಿಗಳಿಂದ ಬೈಕಿಗೆ ಬೆಂಕಿ ಹಚ್ಚಿ ಸಂಪೂರ್ಣ ಸುಟ್ಟು ಕರಕಲು ಮಾಡಿರುವ ಕೃತ್ಯ ನಡೆದಿದೆ. ಯದ್ದಲದಿನ್ನಿ ಗ್ರಾಮದ ಮಹೇಶ ತಂದೆ ಶೇಖರಪ್ಪಗೌಡ ಸುಂಕನೂರ್ ಎಂಬುವರ ಎಚ್‌ಎಫ್ ಡಿಲಕ್ಸ್ ಬೈಕ್ ಸಂಪೂರ್ಣ ಸುಟ್ಟಿದೆ ಹಾಗೆ ವೀರೇಂದ್ರ ಗೌಡ ಎಂಬುವರ ಬೈಕಿಗೆ ಬೆಂಕಿ ಹಚ್ಚಿದ್ದಾರೆ ಅಷ್ಟರಲ್ಲಿ ಮನೆಯವರು ನೋಡಿ ಬೆಂಕಿಯನ್ನು ಆರಿಸಿದ್ದಾರೆ ಹಾಗೆ ಕಳೆದ ತಿಂಗಳ ಹುಲ್ಲಿನ ಬಣವೆಗೆ ಬೆಂಕಿ ಹಚ್ಚಿದ್ದರು.**


ಮೇಲಿಂದ ಮೇಲೆ ಇಂಥ ಒಂದು ಘಟನೆಗಳು ಯದ್ದಲದಿನ್ನಿ ಗ್ರಾಮದಲ್ಲಿ ನಡೆಯುತ್ತಿದ್ದು ಗ್ರಾಮಸ್ಥರು ಬಹಳಷ್ಟು ಆತಂಕ ಒಳಗಾಗಿದ್ದಾರೆ ಅದಕ್ಕಾಗಿ ಸಂಬಂಧಿಸಿದ ಪೊಲೀಸ್ ಇಲಾಖೆಯವರು ಇಂಥ ಘಟನೆಗಳು ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಹಾಗೆ ಹಾಲಾಪೂರ ಗ್ರಾಮ ಪಂಚಾಯತಿಯಿಂದ ಸಿಸಿ ಕ್ಯಾಮೆರಾ ಅಳವಡಿಸಲು ಹೇಳಿ ವರ್ಷ ಆಗಲು ಬಂತು ಅದರ ಬಗ್ಗೆ ಕ್ಯಾರೆ ಅನ್ನುತ್ತಿಲ್ಲ ಎಂದು ಗ್ರಾಮಸ್ಥರಾದ ಜಯಪ್ಪಗೌಡ, ಶಿವಶಂಕರಗೌಡ ಇನ್ನಿತರರು ಆಕ್ರೋಶ ವ್ಯಕ್ತಪಡಿಸುತ್ತಾರೆ.

ಅದಕ್ಕಾಗಿ ಈಗಲಾದರೂ ಪೋಲಿಸ್ ಇಲಾಖೆ ಶೀಘ್ರವೇ ಕಳ್ಳತನ, ಬೆಂಕಿ ಹಚ್ಚುವರನ್ನ ಪತ್ತೆ ಹಚ್ಚಿ ತನಿಖೆ ಮಾಡಿ ಶಿಕ್ಷೆಗೆ ಒಳಪಡಿಸಬೇಕು ಮತ್ತು ಹುಲ್ಲಿನ ಬಣವೆ ಬೆಂಕಿ ಹಚ್ಚಿ ಸುಟ್ಟಿರುವ ರೈತನಿಗೆ ಹಾಗೂ ಬೈಕ್ ಸುಟ್ಟಿರುವ ಮಾಲೀಕನಿಗೆ ಸೂಕ್ತ ಪರಿಹಾರ ಕೊಡಬೇಕು ಜೊತೆಗೆ ಪಂಚಾಯತಿಯವರು ಸಿಸಿ ಕ್ಯಾಮೆರಾ ಅಳವಡಿಸಬೇಕು ಇಲ್ಲವಾದರೆ ಹೊರಟ ಮಾಡಬೇಕಾಗ್ತದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

# ರಿಮ್ಸ್ ಸಂಸ್ಥೆಯಿಂದ ಅಲೈಡ್ ಹೆಲ್ತ್ ಸೈನ್ಸ್ ಕೋರ್ಸ್ ಸೀಟುಗಳ ಭರ್ತಿಗೆ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜನವರಿ 01 (ಕರ್ನಾಟಕ ವಾರ್ತೆ): ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಿಂದ 2025–2026ನೇ ಸಾಲಿನಲ್ಲಿ ಕೆಇಎ ಮೂಲಕ ಎಲ್ಲಾ ಸುತ್ತಿನ ಸೀಟು ಹಂಚಿಕೆಯ ನಂತರ ಉಳಿಕೆಯಾಗಿರುವ ಅಲೈಡ್ ಹೆಲ್ತ್ ಸೈನ್ಸ್ ಕೋರ್ಸ್ಗಳ ಸೀಟುಗಳ ಭರ್ತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.**



ಬಿ.ಎಸ್ಸಿ ಅರವಳಿಕೆ ಮತ್ತು ಆಪರೇಷನ್ ಥಿಯೇಟರ್ ಟೆಕ್ನಾಲಜಿ 10, ಬಿ.ಎಸ್ಸಿ ತುರ್ತು ಮತ್ತು ಟ್ರಾಮಾಕೇರ್ ಟೆಕ್ನಾಲಜಿ 10, ಬಿ.ಎಸ್ಸಿ ಕಾರ್ಡಿಯಾಕ್ ಕೇರ್ ಟೆಕ್ನಾಲಜಿ 10, ಬಿ.ಎಸ್ಸಿ ವೈದ್ಯಕೀಯ ಇಮೇ–ಜಿಂಗ್ ಟೆಕ್ನಾಲಜಿ 10, ಬಿ.ಎಸ್ಸಿ ವೈದ್ಯಕೀಯ ಪ್ರಯೋಗಾಲಯ ಟೆಕ್ನಾಲಜಿ 20, ಬಿ.ಎಸ್ಸಿ ಆಪ್ಟೋಮೆಟ್ರಿ 20, ಬಿ.ಎಸ್ಸಿ ಮೂತ್ರಪಿಂಡದ ಡಯಾಲಿಸಿಸ್ ಟೆಕ್ನಾಲಜಿ 10, ಬ್ಯಾಚುಲರ್ ಆಫ್ ಪಬ್ಲಿಕ್ ಹೆಲ್ತ್ 20 ಸೇರಿದಂತೆ ಒಟ್ಟು 110 ಸೀಟುಗಳು ಹೊಸದಾಗಿ ಮಂಜೂರಾಗಿದ್ದು, ಕರ್ನಾಟಕ ಪರಿಕ್ಷಾ ಪ್ರಾಧಿಕಾರದ ವತಿಯಿಂದ ಅಂತಿಮ ಸುತ್ತಿನ ಸೀಟುಗಳ ಹಂಚಿಕೆಯನ್ನು ವಾಕ್–ಇನ್ ಅಡ್ಮಿಷನ್ ಮೂಲಕ ಕೈಗೊಳ್ಳಲು ಬೆಂಗಳೂರಿನ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರು ಆದೇಶಿಸಿದ್ದು,

ಈ ಆದೇಶದಂತೆ ಜನವರಿ 8ರ ಸಂಜೆ 4ಗಂಟೆಯೊಳಗಾಗಿ ಆಸಕ್ತ ಅಭ್ಯರ್ಥಿಗಳು ನೋಂದಣಿ ಮಾಡಿಕೊಳ್ಳಬಹುದಾಗಿದೆ. ದಿನಾಂಕ 09.01.2026 ಬೆಳ್ಳಿಗ್ಗೆ 11 ಗಂಟೆ ನಂತರ ನೊಂದಾಯಿತ ಅಭ್ಯರ್ಥಿಗಳ ಮೆರಿಟ್ ಮತ್ತು ರೋಸ್ಟರ್ ಆಧಾರದ ಮೇಲೆ ಸೀಟು ಆಯ್ಕೆಮಾಡಿ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯದ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ನೋಡಲ್ ಅಧಿಕಾರಿ ಅನಿಲ ಕುಮಾರ ಮೊಬೈಲ್ ಸಂಖ್ಯೆ:8951772705ಗೆ ಸಂಪರ್ಕಿಸಬಹುದಾಗಿದೆ ಎಂದು ಸಂಸ್ಥೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಯಚೂರು ಮಹಾನಗರ ಪಾಲಿಕೆ ಶೇಷ ಸಾಮರ್ಥ್ಯವೃದ್ಧಿ ತರಬೇತಿ



ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ಮಹಾನಗರ ಪಾಲಿಕೆಯ ಆಡಳಿತದ ಗುಣಮಟ್ಟ ಮತ್ತು ಸೇವಾ ವಿತರಣೆಯನ್ನು ಹೊಸ ಮಟ್ಟಕ್ಕೇರಿಸುವ ದಿಶೆಯಲ್ಲಿ ಪಾಲಿಕೆಯ ಎಲ್ಲಾ ಹಂತದ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಎರಡು ದಿನದ ವಿಶೇಷ ಸಾಮರ್ಥ್ಯವೃದ್ಧಿ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.**

ಮಹಾನಗರ ಪಾಲಿಕೆ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರ ನೇತೃತ್ವದಲ್ಲಿ ನಗರದ ಹಳೆ ನಗರಸಭೆಯ ಸಭಾಂಗಣದಲ್ಲಿ ತರಬೇತಿಗೆ ಚಾಲನೆ ಸಿಕ್ಕಿತು. ಅನುಭವಿ ತಜ್ಞರಾದ ಮಂಗಳೂರಿನ ಸಹಾಯಕ ಪ್ರಾಧ್ಯಾಪಕರು & ತರಬೇತುದಾರರಾದ ಡಾ.ನಂದೀಶ್ ವೈ.ಡಿ., ಮತ್ತು ಮೈಸೂರಿನ ಆಡಳಿತ ತರಬೇತುದಾರರಾದ ಡಾ.ಗಂಗಾಧರ ವೈ.ಬಿ. ಅವರು ತರಬೇತಿ ನೀಡಿದರು. ಪಾಲಿಕೆಯ ಕಂದಾಯ ಶಾಖೆ, ಅಡ್ಮಿನ್ ಶಾಖೆ, ಆರೋಗ್ಯ, ಎಂಜಿನಿಯರಿಂಗ್, ಉದ್ಯಾನ, ಲೆಕ್ಕಶಾಖೆ ಹಾಗೂ ಇತರೆ ವಿಭಾಗಗಳ ಸಿಬ್ಬಂದಿಯನ್ನು ಒಳಗೊಂಡು ಎಲ್ಲಾ ಶ್ರೇಣಿಯ ಸಿಬ್ಬಂದಿ ತರಬೇತಿಯಲ್ಲಿ ಭಾಗಿಯಾಗಿದ್ದರು.

# ಅಂತರಾಷ್ಟ್ರೀಯ ಸಮ್ಮೇಳನದ ಸಮಾರೋಪದ ಸಮಗ್ರ ಕೃಷಿ ಪದ್ಧತಿ ಎಂದೆಂದಿಗೂ ಉತ್ತಮ: ಕುಲಪತಿ ಡಾ.ಎಂ.ಹನುಮಂತಪ್ಪ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜನವರಿ 01 (ಕರ್ನಾಟಕ ವಾರ್ತೆ): ಸಮಗ್ರ ಕೃಷಿ ಪದ್ಧತಿಯು ಎಂದೆಂದಿಗೂ ಉತ್ತಮ ಕೃಷಿ ಪದ್ಧತಿಯಾಗಿದ್ದು, ವಿಶ್ವವಿದ್ಯಾಲಯದ ವಿಜ್ಞಾನಿಗಳು ಇದನ್ನು ಮನಗಂಡು ವಿಸ್ತರಣಾ ಚಟುವಟುಕೆಗಳಲ್ಲಿ ತೊಡಗಿಸಿಕೊಳ್ಳಬೇಕೆಂದುವಿಜ್ಞಾನಗಳ ವಿಶ್ವವಿದ್ಯಾಲಯ ಕುಲಪತಿಗಳಾದ ಡಾ. ಎಂ. ಹನುಮಂತಪ್ಪ ಅವರು ಸಲಹೆ ನೀಡಿದರು.**




ಡಿಸೆಂಬರ್ 31ರ ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಜಗಜ್ಯೋತಿ ಬಸವೇಶ್ವರ ಸಭಾಂಗಣದಲ್ಲಿ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಷ್ಟ್ರೀಯ ಕೃಷಿ ಅಭಿವೃದ್ಧಿ ಸಹಕಾರಿ ನಿಯಮಿತ, ಬಾರಾಮುಲ್ಲಾ, ಜಮ್ಮು ಮತ್ತು ಕಾಶ್ಮೀರ ಇವರುಗಳ ಸಹಯೋಗದಲ್ಲಿ ಮೂರು ದಿನಗಳ ಅವಧಿಯ ಕೃಷಿ, ಪಶುವೈದ್ಯಕೀಯ ಮತ್ತು ಕೃಷಿಗೆ ಸಂಬಂಧಿತ ವಿಷಯಗಳಲ್ಲಿ ಸುಸ್ಥಿರ ನಾವಿನ್ಯತೆಗಳ ಕುರಿತಾದ ಅಂತರಾಷ್ಟ್ರೀಯ ಸಮ್ಮೇಳನದ ಸಮಾರೋಪದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.659

ಸಮ್ಮೇಳನಗಳು, ವಿಚಾರ ಸಂಕಿರಣಗಳು, ಕಾರ್ಯಾಗಾರಗಳು ಜ್ಞಾನ ಮತ್ತು ಕೌಶಲ್ಯಗಳನ್ನು ವಿನಿಮಯ ಮಾಡಿಕೊಳ್ಳಲು ಉತ್ತಮ ವೇದಿಕೆಯಾಗಿವೆ. ಯಾವುದೇ ವಿಷಯದಲ್ಲಿ ಪ್ರಸ್ತುತಿ ಜ್ಞಾನವನ್ನು ಪಡೆಯುವುದು ಅತ್ಯವಶ್ಯವಾಗಿದೆ. ಅದರಲ್ಲೂ ವಿದ್ಯಾರ್ಥಿಗಳು ಇಂತಹ ಸಮ್ಮೇಳನಗಳಲ್ಲಿ ತಪ್ಪದೇ ಭಾಗವಹಿಸಬೇಕೆಂದು ಕಿವಿಮಾತು ಹೇಳಿದರು. ಒಂದು ಸಮೀಕ್ಷೆ ಪ್ರಕಾರ ಸಂಶೋಧನೆಯಲ್ಲಿ ಒಂದು ರೂಪಾಯಿ ಖರ್ಚು ಮಾಡಿದರೆ ಅದ–ರಿಂದ ರೂ. 13.50 ಲಾಭ ಬರುವುದು, ವಿಸ್ತರಣೆಯಲ್ಲಿ 7.00 ರೂ.ಲಾಭ ಬರುವುದು ಮತ್ತು ಕೃಷಿ ಶಿಕ್ಷಣದಲ್ಲಿ ಒಂದು ರೂಪಾಯಿಯನ್ನು ವ್ಯಯಿಸಿದರೆ ಕೇವಲ 2.05 ರೂ.ಲಾಭ ಬರುವುದು. ಆದ್ದರಿಂದ ವಿದ್ಯಾರ್ಥಿಗಳಿಗಾಗಲೀ, ರೈತರಿಗಾಗಲೀ ಪರಿಪೂರ್ಣ ಮಟ್ಟದ ಕೃಷಿ ಶಿಕ್ಷಣವು ದೊರೆಯುವಂತಾಗಬೇಕೆಂದರೂ.

ಇಂದಿನ ವಿದ್ಯಾರ್ಥಿಗಳು ಕೃಷಿ ಶಿಕ್ಷಣವನ್ನು ಪರಿಪೂರ್ಣತೆಯಿಂದ ಪಡೆದು ಉತ್ತಮ ಉದ್ಯಮಿದಾರರಾಗಿ ಹತ್ತಾರು ಜನಕ್ಕೆ ಉದ್ಯೋಗ ಕೊಡುವಂತಾಗಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಕೃತಕ ಬುದ್ಧಿಮತ್ತೆ, ಯಂತ್ರ ಕಲಿಕೆ, ಡ್ರೋನ್ ಬಳಕೆ ಇತ್ಯಾದಿಗಳನ್ನು ವಿದ್ಯಾರ್ಥಿಗಳು ಹಾಗೂ ವಿಜ್ಞಾನಿಗಳು ಕರಗತಮಾಡಿಕೊಂಡು ಕಾರ್ಯಸಾಧುವಾದ ತಂತ್ರಜ್ಞಾನ, ಸುಸ್ಥಿರ ಆರ್ಥಿಕತೆ ಹಾಗೂ ಸಮಾಜ ನಿರೀಕ್ಷಿತ ಅಂಶಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು. ಈ ವೇಳೆ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿದ್ದ ವಿಶ್ವವಿದ್ಯಾಲಯದ ಶಿಕ್ಷಣ ನಿರ್ದೇಶಕರಾದ ಡಾ. ಗುರುರಾಜ ಸುಂಕದ ಅವರು ಮಾತನಾಡಿ, ಕೃಷಿಯೇ ನಮ್ಮೆಲ್ಲರ ಜೀವಾಳವಾಗಿದ್ದು, ಶೇ.48 ರಷ್ಟು ಜನ ನೇರವಾಗಿ ಕೃಷಿ ಅವಲಂಬಿತರಾಗಿರುವರು.

ನಮ್ಮ ದೇಶದ ಜಿ.ಡಿ.ಪಿ ಗೆ ಶೇ. 17 ರಷ್ಟು ಕೊಡುಗೆಯು ಕೃಷಿಯದ್ದಾಗಿದೆ. ಆದ–ಾಗ್ಯೂ ಹೆಚ್ಚು ಸಂಕೀರ್ಣವಾದ ಈ ಕ್ಷೇತ್ರವನ್ನು ಕಡೆಗಣಿಸಲ್ಪಟ್ಟಿರುವುದು ವಿಷಾದನೀಯವೆಂದರು. ರೈತರೇ ಮೊದಲು ಎಂಬ ಸಿದ್ಧಾಂತದೊಂದಿಗೆ ನಾವೆಲ್ಲರೂ ಕೆಲಸಮಾಡಬೇಕಾಗಿದೆ. ವಿದ್ಯಾರ್ಥಿಗಳೂ ಕೂಡ ಕೃಷಿ ಶಿಕ್ಷಣವನ್ನು ಪರಿಪೂರ್ಣತೆಯಿಂದ ಕಲಿತರೆ ಮಾತ್ರ ಉತ್ತಮ ಉದ್ಯೋಗ ಅವಕಾಶಗಳು ದೊರೆಯುವವು ಎಂದು ಕಿವಿಮಾತು ಹೇಳಿದರು. ಈ ವೇಳೆ ಸಮ್ಮೇಳನದ ಸಂಯೋಜಕರಾದ ಡಾ.ಆರ್.ಎ. ಶಾಹ ಬಾರಾಮುಲ್ಲ ಅವರು ಮಾತನಾಡಿ, ಇಂತಹ ಸಮ್ಮೇಳನಗಳು ಜ್ಞಾನಾರ್ಜನೆ, ಮತ್ತು ಕೌಶಲ್ಯಭಿವೃದ್ಧಿಗೆ ಪೂರಕವಾಗಿವೆ.

ಆದ್ದರಿಂದ ವಿದ್ಯಾರ್ಥಿಗಳು ಇವುಗಳಲ್ಲಿ ಭಾಗವಹಿಸಿ ಮುಂದಿನ ದಿನಗಳಲ್ಲಿ ಕೃಷಿ ಕ್ಷೇತ್ರದ ನಿರಂತರ ಬೆಳವಣಿಗೆಗೆ ಸಹಕಾ–ರಿಯಾಗಬೇಕೆಂದು ಕರೆ ನೀಡಿದರು. ಈ ವೇಳೆ ಅಂತರಾಷ್ಟ್ರೀಯ ಸಮ್ಮೇಳನದ ಆಯೋಜನಾ ಸಂಘಟಕರಾದ ಡಾ. ಜಾಗೃತಿ ಬಿ. ದೇಶಮಾನ್ಯ ಅವರು ಸಮಾರೋಪ ಸಮಾರಂಭದಲ್ಲಿ ಹಾಜರಿದ್ದ ಎಲ್ಲರನ್ನು ಸ್ವಾಗತಿಸಿ, ಸಮ್ಮೇಳನದಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಿದ್ದ ಎಲ್ಲ ಸಮ್ಮೇಳನಾರ್ಥಿಗಳಿಗೆ ವಿಶ್ವವಿದ್ಯಾಲಯದ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು. ಹಾಗೂ ಮುಂಬರುವ 2026ಕ್ಕೆ ಶುಭಕಾಮನೆಗಳನ್ನು ಕೋರಿದರು. ಈ ವೇಳೆ ಕೃಷಿ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ.ಜಿ.ಬಿ. ಲೋಕೇಶ್ ಅವರು ಮೂರು ದಿನಗಳ ಅವಧಿಯ ಸಮ್ಮೇಳನದ ವರದಿಯನ್ನು ಮಂಡಿಸಿದರು. ಕಾರ್ಯಕ್ರಮದಲ್ಲಿ ಉತ್ತಮ ರೀತಿಯಲ್ಲಿ ಸಂಶೋಧನಾ ಫಲಿತಾಂಶಗಳನ್ನು ಮಂಡಿಸಿದ ಹಾಗೂ ಉತ್ತಮ ರೀತಿಯಲ್ಲಿ ಭಿತ್ತಿಚಿತ್ರಗಳನ್ನು ಪ್ರದರ್ಶಿಸಿದ ಸಮ್ಮೇಳನಾರ್ಥಿಗಳಿಗೆ ಪ್ರಶಸ್ತಿಗಳನ್ನು ನೀಡಲಾಯಿತು. ಇದೇ ಸಂದರ್ಭದಲ್ಲಿ ಕೃಷಿ ಅರ್ಥಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಸುರೇಶ್ ಅವರು ಸಮಾರೋಪ ಸಮಾರಂಭಕ್ಕೆ ವಂದಿಸಿದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಎಂಡಿ ಹೋಮಿಯೋಪತಿ ಫಾರ್ಮಸಿ

ಹೋಮಿಯೋಪತಿ ಫಾರ್ಮಸಿಯಲ್ಲಿ ಎಂಡಿ ಎಂಬುದು ಮೂರು ವರ್ಷಗಳ ಸ್ನಾತಕೋತ್ತರ ವಿಶೇಷ ಕೋರ್ಸ್ ಆಗಿದ್ದು, ಈಗಾಗಲೇ ಹೋಮಿಯೋಪತಿ ಮೆಡಿಸಿನ್ ಮತ್ತು ಸರ್ಜರಿಯಲ್ಲಿ ಬ್ಯಾಚುಲರ್ (ಃಊಒಖ) ಪದವಿಯನ್ನು ಹೊಂದಿರುವ ವ್ಯಕ್ತಿಗಳಿಗೆ ಇದನ್ನು ನೀಡಲಾಗುತ್ತದೆ. ಈ ಕೋರ್ಸ್ ಹೋಮಿಯೋಪತಿ ಔಷಧಿಗಳನ್ನು ತಯಾರಿಸುವುದು, ಪ್ರಮಾಣೀಕರಿಸುವುದು ಮತ್ತು ವಿತರಿಸುವ ವೈಜ್ಞಾನಿಕ ತತ್ವಗಳು ಮತ್ತು ಪ್ರಾಯೋಗಿಕ ಅಂಶಗಳ ಮೇಲೆ ಕೇಂದ್ರೀಕರಿಸುತ್ತದೆ.ಹೋಮಿಯೋಪತಿ ಫಾರ್ಮಸಿಯಲ್ಲಿ ಎಂಡಿಗೆ ಅರ್ಹತೆ ಪಡೆಯಲು: ಒಂದು ವರ್ಷದ ಕಡ್ಡಾಯ ಇಂಟರ್ನ್‌ಶಿಪ್ ಸೇರಿದಂತೆ 5.5 ವರ್ಷಗಳ ಕೋರ್ಸ್ ಅನ್ನು ಪೂರ್ಣಗೊಳಿಸಿದ ನಂತರ, ನೀವು ರಾಷ್ಟ್ರೀಯ ಹೋಮಿಯೋಪತಿ ಆಯೋಗ (NCH) ನಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಃಊಒಖ ಪದವಿ (ಅಥವಾ ಸಮಾನ ಅರ್ಹತೆ) ಹೊಂದಿರಬೇಕು.ಪ್ರವೇಶವು ಸಾಮಾನ್ಯವಾಗಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (NTA) ನಡೆಸುವ ಅಖಿಲ ಭಾರತ ಆಯುಷ್ ಸ್ನಾತಕೋತ್ತರ ಪ್ರವೇಶ ಪರೀಕ್ಷೆಯಲ್ಲಿ (AIAPGET) ಪಡೆದ ಅಂಕಗಳನ್ನು ಆಧರಿಸಿದೆ. ಹೋಮಿಯೋಪತಿ ಫಾರ್ಮಸಿಯಲ್ಲಿ ಎಂಡಿ ಪೂರ್ಣಗೊಳಿಸಿದ ನಂತರ, ಪದವೀಧರರು ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿ ವಿವಿಧ ಪಾತ್ರಗಳಲ್ಲಿ ಕೆಲಸ ಮಾಡಬಹುದು. ವೃತ್ತಿ ಮಾರ್ಗಗಳು ಇವುಗಳನ್ನು ಒಳಗೊಂಡಿವೆ:ಆಸ್ಪತ್ರೆಗಳು ಅಥವಾ ಖಾಸಗಿ ಚಿಕಿತ್ಸಾಲಯಗಳಲ್ಲಿ ಹೋಮಿಯೋಪತಿ ಫಾರ್ಮಸಿಸ್ಟ್ ಆಗಿ ಕೆಲಸ ಮಾಡುವುದು.ಶ್ವಾಬೆ ಇಂಡಿಂ-ಯಾ ಮತ್ತು ಎಸ್‌ಬಿಎಲ್‌ನಂತಹ ಸಂಶೋಧನಾ ಸಂಸ್ಥೆಗಳು ಮತ್ತು ಔಷಧೀಯ ಉತ್ಪಾದನಾ ಕಂಪನಿಗಳಲ್ಲಿ ಅವಕಾಶಗಳು. ಒಬ್ಬರ ಸ್ವಂತ ಖಾಸಗಿ ಚಿಲ್ಲರೆ ಅಥವಾ ಸಗಟು ಹೋಮಿಯೋಪತಿ ಫಾರ್ಮಸಿ ವ್ಯವಹಾರವನ್ನು ಪ್ರಾರಂಭಿಸುವುದು. ಔಷಧ ನಿರೀಕ್ಷಕ ಅಥವಾ ವೈದ್ಯಕೀಯ ಪ್ರತಿನಿಧಿಯಾಗಿ ಪಾತ್ರಗಳನ್ನು ತೆಗೆದುಕೊಳ್ಳುವುದು. ಶೈಕ್ಷಣಿಕ, ಸಂಶೋಧನೆ ಅಥವಾ ಬೋಧನಾ ಹುದ್ದೆಗಳನ್ನು ಪ್ರವೇಶಿಸಲು ಪಿಎಚ್‌ಡಿ ಪಡೆಯುವುದು. ಈ ಕಾರ್ಯಕ್ರಮವು ಸೈದ್ಧಾಂತಿಕ ಜ್ಞಾನ ಮತ್ತು ಸೇವಾವಧಿಯ ಪ್ರಾಯೋಗಿಕ ತರಬೇತಿಯನ್ನು ಸಂಯೋಜಿಸುತ್ತದೆ, ಇವುಗಳಂತಹ ವಿಷಯಗಳನ್ನು ಒಳಗೊಂಡಿದೆ:ಹೋಮಿಯೋಪತಿ ಫಾರ್ಮಾಕೋಪಿಯಾಗಳು.ಪೋಸಾಲಜಿ ಮತ್ತು ವಿತರಣೆಯ ತತ್ವಗಳು. ಔಷಧ ಸಾಬೀತು ಮತ್ತು ಡೈನಮೈಸೇಶನ್ (ಶಕ್ತಿವರ್ಧನೆ). ಔಷಧವೃತ್ತಿಗೆ ಸಂಬಂಧಿಸಿದ ಗುಣಮಟ್ಟ ನಿಯಂತ್ರಣ ಮತ್ತು ಶಾಸನ. ಸಂಶೋಧನಾ ವಿಧಾನ ಮತ್ತು ಜೈವಿಕ ಅಂಕಿಅಂಶಗಳು.

## ಪ್ರವಾಸಿ ಮಾರ್ಗದರ್ಶಿ ತರಬೇತಿಗೆ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜನವರಿ 01 (ಕರ್ನಾಟಕ ವಾರ್ತೆ): ಪ್ರವಾಸೋದ್ಯಮ ಇಲಾಖೆಯಿಂದ 2024-25ನೇ ಸಾಲಿನ ಜಿಲ್ಲೆಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇ-ರಿದ ವಿದ್ಯಾವಂತ ನಿರುದ್ಯೋಗಿ ಅಭ್ಯರ್ಥಿಗಳಿಗೆ ಪ್ರವಾಸಿ ಮಾರ್ಗದರ್ಶಿ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.**

2024-25ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಡಿ ಕಿತ್ತೂರು ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟದ ಭಾಗದ 08 ಜಿಲ್ಲೆಗಳಲ್ಲಿ ಪ್ರವಾಸಿ ತಾಣಗಳನ್ನು ಉತ್ತೇಜಿಸಿ ಪ್ರಚಾರ ಪಡಿಸಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಿಗೆ ಒಂದು ತಿಂಗಳ ಪ್ರವಾಸಿ ಮಾರ್ಗದರ್ಶಿ ತರಬೇತಿ ನೀಡಲು ಹಾಗೂ ಈ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಜಾಕೆಟ್ ಹಾಗೂ ಒಂದು ಜೊತೆ ಸ್ಪೋರ್ಟ್ಸ್ ಶೂ ಒದಗಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಜಿಲ್ಲೆಗೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿ-11 ಹಾಗೂ ಪಂಗಡದ-09 ಗುರಿಯನ್ನು ನಿಗಧಿಪಡಿಸಲಾಗಿದ್ದು, ಪರಿಶಿಷ್ಟ ಜಾತಿ-10 ಹಾಗೂ ಪಂಗಡದ-08 ಗುರಿಗಳು ಬಾಕಿ ಉಳಿದಿರುತ್ತವೆ. ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳಿಗೆ ಕನಿಷ್ಠ 21 ವರ್ಷಗಳು ಹಾಗೂ ಗರಿಷ್ಠ 48 ವಯೋಮಿತಿಯೊಳಗಿರಬೇಕು. ಅರ್ಜಿಗಳನ್ನು ಕಚೇರಿಯಿಂದ ಪಡೆದು ಜನವರಿ 20ರೊಳಗಾಗಿ ಸಲ್ಲಿಸಬಹುದಾಗಿದೆ. ಅವಧಿ ಮುಂಗಿದ ನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಪ್ರವಾಸೋದ್ಯಮ ಇಲಾಖೆ, ಗಣೇಶ ಗುಡಿ ಹತ್ತಿರ, ನಿಜಲಿಂಗಪ್ಪ ಕಾಲೋನಿ, ರಾಯಚೂರು ಜಿಲ್ಲೆ-584101, ದೂರವಾಣಿ ಸಂಖ್ಯೆ:08532200677, ಕಚೇ-ರಿಯ ವೇಳೆಯಲ್ಲಿ ಸಂಪರ್ಕ ಮಾಡಬಹುದಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರಾದ ನಜೀರ ಆಮದ ಕನವಳ್ಳಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಾಸಕಾಂಗ ಕಾರ್ಯಾಂಗ ನ್ಯಾಯಾಂಗಕ್ಕಿಂತಲೂ ಶಕ್ತಿಯುತವಾದ್ದು ಪತ್ರಿಕಾರಂಗ: ಕೆ.ವಿರುಪಾಕ್ಷಪ್ಪ.

ನೈಜ್ಯ ದೆಸೆ ನ್ಯೂಸ್



**ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಮಾಧ್ಯಮಕ್ಕೆ 4 ನೇ ಸ್ಥಾನ ಇದ್ದರು ಕೂಡ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಕ್ಕಿಂತಲೂ ಶಕ್ತಿಯುತವಾದದ್ದು ಈ ಪತ್ರಿಕಾರಂಗ, ನಮಗೆ ಸೀಮಿತ ಸ್ವಾತಂತ್ರ್ಯವಿದೆ, ನಿಮಗೆ ಅಸೀಮಿತ ಸ್ವಾತಂತ್ರ್ಯವಿದೆ. ಎಲ್ಲವೂ ದಾರಿ ತಪ್ಪಿದರೂ ಪತ್ರಿಕಾರಂಗ ಮಾತ್ರ ದಾರಿ ತಪ್ಪಬಾರದು ತಪ್ಪಿದರೆ ಪ್ರಜಾಪ್ರಭುತ್ವದ ವ್ಯವಸ್ಥೆ ದಾರಿ ತಪ್ಪಿದಂಗಾಗುತ್ತೆ ಎಂದು ಮಾಜಿ ಸಂಸದ ಕೆ.ವಿರುಪಾಕ್ಷಪ್ಪ ಹೇಳಿದರು.**

ನಗರದ ಎ.ಕೆ. ಗೋಪಾಲನಗರದಲ್ಲಿರುವ ತಮ್ಮ ಗೆಸ್ಟ್ ಹೌಸ್‌ನಲ್ಲಿ ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಮತ್ತು ತಾಲೂಕು ಘಟಕಕ್ಕೆ ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳಿಗೆ ಗೌರವ ಸನ್ಮಾನ ಸಮಾರಂಭ ಹಮ್ಮಿಕೊಂಡು ಮಾತನಾಡಿದ ಅವರು, ಈ ಹಿಂದೆ ಹಳಬರಿಗೆ ಇದ್ದ ನಿಷ್ಠೆ, ಬದ್ದತೆ, ಹೊಸಬರಿಗೆ ಇಲ್ಲದಂತೆ ಕಾಣುತ್ತದೆ. ಈ ಕೆಲಸಕ್ಕೆ ಈ ಸ್ಥಾನಕ್ಕೆ ಬರಬೇಕಾದವ-ರಿಗೆ ನಿಷ್ಠೆ, ಬದ್ದತೆ, ಪ್ರಾಮಾಣಿಕತೆ ಇರಬೇಕು.

ರಾಜಕಾರಣಿಗಳಿಗೂ ಬದ್ದತೆ ಇರಬೇಕು. ಆದರೆ ನಾವು ದಾರಿ ತಪ್ಪಿದ್ದೇವೆ, ಅದಕ್ಕೆ ನೂರಾರು ಕಾರಣಗಳಿವೆ. ಅಧಿಕಾರಕ್ಕಾಗಿ, ಹಣಕ್ಕಾಗಿ, ದಾರಿ ತಪ್ಪಿದ್ದೇವೆ, ಶಾಸಕಾಂಗ ಕಾರ್ಯಾಂಗ ನ್ಯಾಯಾಂಗ ಈ ಮೂರರ ಸಾಲಿಗೆ ಪತ್ರಿಕಾರಂಗ ಸೇರಬಾರದು. ಪತ್ರಿಕಾರಂಗದ ಸ್ವಾತಂತ್ರ್ಯ ಉಳಿಸಿಕೊಂಡು ವೃತ್ತಿ ನಿಷ್ಠೆಯನ್ನು ಕಾಪಾಡಿ ಎಂದು ತಮ್ಮ ಅನುಭವದ ನುಡಿಗಳನ್ನು ನುಡಿದರು. ನಂತರ ಹಿರಿಯ ಪತ್ರಕರ್ತರಾದ ಡಿ.ಎಚ್.ಕಂಬಳಿ ಮಾತನಾಡಿ, ಪತ್ರಿಕೆಯ ಕಷ್ಟ ನಷ್ಟದ ಸ್ವವಿವರವಾಗಿ ಮಾತನಾಡುತ್ತಾ ದೀಪದ ಬುಡದಲ್ಲಿ ಕತ್ತಲು ಕವಿದಹಾಗೆ ಪತ್ರಕರ್ತರು ಎಷ್ಟೇ ಸಾಮಾಜಿ-ಕ ಜವಾಬ್ದಾರಿ ತೋರಿ ಬೆಳಕು ತೋರಿದರು ಕೂಡ ಅವರ ಬದುಕಿನಲ್ಲಿ ಕತ್ತಲು ಆವರಿಸಿದೆ.

ವೃತ್ತಿ ನಿಷ್ಠೆ ತೋರಲು ಸಂಬಳ ಇಲ್ಲ. ಕನಿಷ್ಠ ದಿನಗೂಲಿ ನೌಕರ-ರಿಗೆ ಇರುವಷ್ಟು ಸಂಬಳವಿಲ್ಲ. ಆದರೂ ಈ ಪತ್ರಿಕಾರಂಗ ಆಕರ್ಷಣೆಯಾಗುತ್ತಿದೆ. ಕಾರಣ ಪತ್ರಕರ್ತರು ಎಂಬುದು ಒಂದು ಗೌರವದ ಸ್ಥಾನ ಎಂಬ ಕಾರಣಕ್ಕಾಗಿಯಾದರೂ ಪತ್ರಿಕಾರಂಗಕ್ಕೆ ಬರುತ್ತಿದ್ದಾರೆ. ಯಾರೇ ಬಂದರೂ ಸಹ ಈ ಪತ್ರಿಕಾ ವೃತ್ತಿ ಧರ್ಮ ಕಾಪಾಡಬೇಕೆಂದು ಕಿವಿ ಮಾತು ಹೇಳಿದರು. ತುರ್ವಿಹಾಳ ಅಮೋಘ ಸಿದ್ದೇಶ್ವರ ಮಠದ ಚಿದಾನಂದಯ್ಯ ಗುರುವಿನ್ ಮಾತನಾಡಿ, ಖಡ್ಗಕ್ಕಿಂತಲೂ ಅರಿತವಾದದ್ದು ಪೆನ್, ರವಿ ಕಾಣದ್ದನ್ನ ಕವಿ ಕಂಡ, ಕವಿ ಕಾಣದ್ದನ್ನ ಪತ್ರಕರ್ತರು ಕಂಡರು ಎಂಬ ನಾಣ್ಣುಡಿ ಇದೆ. ಇದು ನಿಜ ಕೂಡ ಲೇಖನಿಗಿಂತ ಹರಿತವಾದದು ಯಾವುದು ಇಲ್ಲ ಈ ದಿಶೆಯಲ್ಲಿ ಪತ್ರಿಕಾ ಧರ್ಮವನ್ನು ಉಳಿಸುವುದು ಮುಖ್ಯ, ವೃತ್ತಿಯಲ್ಲಿ ನಿಷ್ಠೆ, ಪ್ರಾಮಾಣಿಕತೆ, ಬದ್ದತೆ, ಕಾಪಾಡಿಕೊಳ್ಳಿ, ಮುಂದಿನ ದಿನಗಳಲ್ಲಿ ಸರ್ಕಾರ ಪತ್ರಕರ್ತರಿಗೆ ಒಂದಿಷ್ಟು ವೇತನ ಕೊಡುವಂತಾಗಲಿ ಎಂದರು.

ನಂತರ ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಮತ್ತು ತಾಲೂಕು ಘಟಕಕ್ಕೆ ನೂತನವಾಗಿ ಆಯ್ಕೆಯಾದ ಜಿಲ್ಲಾ ಉಪಾಧ್ಯಕ್ಷ ಅಶೋಕ ಬೆನ್ನೂರು, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಾದ ಚಂದ್ರಶೇಖರ್ ಯರದಿಹಾಳ, ಮಹ್ಮದ್ ಮುಸ್ತಫಾ, ತಾಲೂಕು ಘಟಕಕ್ಕೆ ಅಧ್ಯಕ್ಷರಾದ ಶರಣಪ್ಪ ಕೆ.ಗೋನಾಳ, ಪ್ರಧಾನ ಕಾರ್ಯದರ್ಶಿ ಅಮರೇಶ ಅಲಬನೂರು, ಉಪನ್ಯಾಸಕರಾದ ಯಮನಪ್ಪ ಪವಾರ್, ದುರುಗೇಶ, ಕಾರ್ಯದರ್ಶಿ ರಾಘವೇಂದ್ರ, ಖಜಾಂಚಿ ಚಂದ್ರಶೇಖರ್ ಬೆನ್ನೂರು, ಕಾರ್ಯಕಾರಿ ಸಮಿತಿ ಸದಸ್ಯರಾದ ಡಿ.ಎಚ್.ಕಂಬಳಿ, ಪ್ರಲ್ಹಾದ್ ಗುಡಿ, ಶ್ಯಾಮಕುಮಾರ, ವೀರೇಶ ಗಡ್ಡಿಮಾಳ, ಇವರಿಗೆ ಸನ್ಮಾನಿಸಿ ಗೌರವಿಸಿದರು. ಈ ವೇಳೆ: ಕೆಪಿಸಿಸಿ ಸದಸ್ಯ ನಲ್ಲಾ ವೆಂಕಟೇಶ್ವರರಾವ್, ಎಂ.ದೊಡ್ಡಬಸವರಾಜ, ಈರೇಶ ಇಲ್ಲೂರು, ಸಿದ್ರಾಮೇಶ ಮನ್ನಾಪೂರು, ಸಿದ್ದೇಶ ಗುರಿಕಾರ, ಸೇರಿದಂತೆ ಅನೇಕರಿದ್ದರು.

# ಸರ್ಕಾರಿ ಶಾಲೆಗಳ ಕುರಿತು ಅಭಿಮಾನ ಇರಲಿ: ಶಾಸಕ ರಾಜುಗೌಡ



ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಮಕ್ಕಳಿಗೆ ಕೇವಲ ಗುಣಮಟ್ಟದ ಶಿಕ್ಷಣ ಕೊಟ್ಟರೆ ಸಾಲದು ಅವರ ಬದುಕಿಗೆ ಅಗತ್ಯವಾಗಿರುವ ಉತ್ತಮ ಸಂಸ್ಕಾರಗಳನ್ನೂ ಕೊಡಲು ಶಿಕ್ಷಕರು ಪ್ರಯತ್ನಿಸಬೇಕು ಎಂದು ದೇವರ ಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ (ಕು.ಸಾಲವಾಡಗಿ) ಹೇಳಿದರು.**

.ತಾಲೂಕಿನ ಗಡಿ ಸೋಮನಾಳ ಗ್ರಾಮದಲ್ಲಿ ಉನ್ನತೀಕರಿಸಿದ ಸರ್ಕಾರಿ ಪ್ರೌಢಶಾಲೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸರ್ಕಾರಿ ಶಾಲೆಗಳ ಕುರಿತು ಕೀಳುರಿಮೆ ಬೇಡ,ಅವು ಖಾಸಗಿ ಸಂಸ್ಥೆಗಳ ಜೊತೆ ಪೈಪೋಟಿ ನಡೆಸುವಷ್ಟು ಇಂದು ಸಶಕ್ತವಾಗಿವೆ, ಇದಕ್ಕಾಗಿ ಸರ್ಕಾರ ಎಲ್ಲ ರೀತಿಯ ಸೌಲಭ್ಯಗಳನ್ನು ನೀಡುತ್ತಿದೆ ಸರ್ಕಾರಿ ಶಾಲೆಗಳ ಕುರಿತು ಎಲ್ಲರಲ್ಲೂ ಅಭಿಮಾನವಿರಲಿ. ಶಿಕ್ಷಣ ಸಚಿವರು ನನ್ನ ಕ್ಷೇತ್ರಕ್ಕೆ ನಾಲ್ಕು ಪ್ರೌಢಶಾಲೆಗಳನ್ನು ಮಂಜೂರು ಮಾಡಿಸಿಕೊಟ್ಟಿದ್ದಾರೆ ಅವ-ರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದ ಅವರು ಇನ್ನು ಮುಂದೆ ಸರ್ಕಾರಿ ಶಾಲೆಗಳಲ್ಲಿ ನನಗೆ ಸನ್ಮಾನಿಸುವ ಕಾರ್ಯಕ್ರಮ ಬಿಡಬೇಕು ಏಕೆಂದರೆ ಇದು ಶಿಕ್ಷಕರಿಗೆ ಹೊರೆಯಾಗುತ್ತದೆ ಎಂದರು.

ಜೆಡಿಎಸ್ ತಾಲೂಕಾಧ್ಯಕ್ಷ ಮಡುಸೌಕಾರ ಬಿರಾದಾರ ಮಾತನಾಡಿ ನಮ್ಮೂ-ರಿಗೆ ಪ್ರೌಢಶಾಲೆ ಇಲ್ಲದೆ ಇರುವುದರಿಂದ ಇಲ್ಲಿಯ ಮಕ್ಕಳು ದೂರದ ಪಟ್ಟಣಕ್ಕೆ ಹೋಗಬೇಕಾಗಿ-ತ್ತು ಇದರ ಅನುಕೂಲ ಮಾಡಿಕೊಟ್ಟ ಶಾಸಕ ರಾಜುಗೌಡರಿಗೆ ಅಭಿನಂದಿಸುತ್ತೇನೆ. ಶಾಲೆಯಲ್ಲಿ ಮಕ್ಕಳ ಸಂಖ್ಯೆ ಹೆಚ್ಚಾಗಲು ಶಿಕ್ಷಕರು ಶಕ್ತಿ ಮೀರಿ ಪ್ರಯತ್ನಿಸಬೇಕು, ಸರ್ಕಾರಿ ಶಾಲೆಯಲ್ಲಿ ಪ್ರವೇಶ ಪಡೆದು ಖಾಸಗಿ ಶಾಲೆಗಳಿಗೆ ಹೋಗಲು ಅವಕಾಶ ಮಾಡಿಕೊಡಬಾರದು ಎಂದರು. ಬಿಇ ಓ ಬಿ.ಎಸ್.ಸಾವಳಗಿ,ಜೆಡಿ-ಎಸ್ ಜಿಲ್ಲಾಧ್ಯಕ್ಷ ಬಸನಗೌಡ ಮಾಡಗಿ, ಮುಖಂಡ ಜೈ ಭೀಮ್ ಮುತ್ತಗಿ ಹಾಗೂ ಗುರುಬಸಪ್ಪ ಕಂಗಳ ಮಾತನಾಡಿ ಶಾಸಕರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಕಲಿಕಾ ಹಬ್ಬ ಕಾರ್ಯಕ್ರಮದ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ಮಕ್ಕಳಿಗೆ ಹಾಗೂ ಶಾಲೆ ಉನ್ನತಿಕರಿಸಲು ಶ್ರಮಿಸಿದ ಮುಖ್ಯ ಶಿಕ್ಷಕ ಟಿ. ಎಸ್.ಲಮಾಣಿ ಅವರಿಗೆ ಶಾಸಕರಿಂದ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷ ಅಶೋಕಗೌಡ ಪಾಟೀಲ, ಉಪಾಧ್ಯಕ್ಷ ವೀರೇಶಗೌಡ ಪಾಟೀಲ(ಕಾರಗನೂರ), ಎಸ್ ಡಿ ಎಮ್ ಸಿ ಅಧ್ಯಕ್ಷ ಬೀರಪ್ಪ ಪೂಜಾರಿ,ಇಸಿಓ ಸುರೇಶ ಹಿರೇಮಠ,ಬಿ. ಆರ್.ಸಿ.ಆರ್.ಬಿ.ದಮ್ಮೂರಮಠ,ಬಿ. ಆರ್.ಪಿ.ಕಾಶಿನಾಥ ಸಜ್ಜನ, ಸಿ.ಆರ್.ಸಿ.ಎಸ್. ಎಂ.ಪಾಳ್ಕಿ, ಮು.ಗು.ಟಿ.ಎಸ್.ಲಮಾಣಿ, ಮುಖಂಡರಾದ ಸಾಹೇಬಗೌಡ ಬಿರಾದಾರ '(ಲಕ್ಕುಂಡಿ), ಗ್ರಾಪಂ ಸದಸ್ಯ ಭೀಮನಗೌಡ ತಂಗಡಗಿ, ನಿಂಗನಗೌಡ ಪಾಟೀಲ, ಗ್ರಾಪಂ ಮಾಜಿ ಅಧ್ಯಕ್ಷೆ ಅಶ್ವಿನಿ ಸಾ.ಬಿರಾದಾರ,ಕೆ.ಪಿ. ಎಸ್.ಟಿ. ಅಧ್ಯಕ್ಷ ಎಸ್ ಎಸ್ ತೀರ್ಥ, ಹುಸೇನ ಮುಲ್ಲಾ, ಯೋಗೇಶ ಚೌದ್ರಿ, ಮು.ಶಿ.ಜಿ.ಕೆ. ಮಣೂರ, ಮು.ಗು.ಬಿ.ಸಿ.ಗೋಗಿ, ಸಂಘಟನಾ ಕಾರ್ಯದರ್ಶಿ ಅಂಬಿಕಾ ಎನ್, ಸಿಬ್ಬಂದಿ ವರ್ಗ, ಪಾಲಕರು ಹಾಗೂ ವಿದ್ಯಾರ್ಥಿಗಳು ಇದ್ದರು.

# NSB ಅಧ್ಯಕ್ಷತೆಯಲ್ಲಿ, ಎಸ್‌ಸಿಪಿ, ಟಿಎಸ್‌ಪಿ ಅನುದಾನದ ಅಡಿ ಕೈಗೊಳ್ಳಲಾಗಿರುವ ಯೋಜನೆಗಳ ಜಾರಿ ಹಾಗೂ ಕಾಮಾಗಾರಿಗಳ ಪ್ರಗತಿ ಪರಿಶೀಲನೆ ಸಭೆ

ನೈಜ್ಯ ದೆಸೆ ನ್ಯೂಸ್



**ವಿಕಾಸಸೌಧದ ನನ್ನ ಕಚೇರಿಯಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ರಾಜ್ಯದಲ್ಲಿ ಎಸ್‌ಸಿಪಿ, ಟಿಎಸ್‌ಪಿ ಅನುದಾನದ ಅಡಿ ಕೈಗೊಳ್ಳಲಾಗಿರುವ ಯೋಜನೆಗಳ ಜಾರಿ ಹಾಗೂ ಕಾಮಾಗಾರಿಗಳ ಪ್ರಗತಿ ಪರಿಶೀಲನೆ ಸಭೆ ನಡೆಸಲಾಯಿತು.**

ಸಭೆಯ ಮುಖ್ಯಾಂಶಗಳು ?2024?25ನೇ ಆರ್ಥಿಕ ವರ್ಷದಲ್ಲಿ, ಎಸ್‌ಸಿಪಿ?ಟಿಎಸ್‌ಪಿ ಕಾಯ್ದೆಯಡಿ ನಮ್ಮ ಇಲಾಖೆಯ ಮೂಲಕ ಸುಮಾರು 365 ಕೋಟಿರೂ.ವೆಚ್ಚದಲ್ಲಿ 3,388 ಪರಿಶಿಷ್ಟ ಜಾತಿ ರೈತ ಕುಟುಂಬಗಳು, 1,983 ಪರಿಶಿಷ್ಟ ಪಂಗಡದ ಒಟ್ಟು 5,371 ರೈತ ಕುಟುಂಬಗಳಿಗೆ ವಿದ್ಯುತ್ ಸಂಪರ್ಕದೊಂದಿಗೆ ಕೊಳವೆಬಾವಿ ಸೌಲಭ್ಯವನ್ನು ಯಶಸ್ವಿಯಾಗಿ ಅಳವಡಿಸಿರುವ ಬಗ್ಗೆ ಮಾಹಿತಿ ಪಡೆಯಲಾಯಿತು.

?2025?26ನೇ ಆರ್ಥಿಕ ವರ್ಷದಲ್ಲಿ ಎಸ್‌ಸಿಪಿ?ಟಿಎಸ್‌ಪಿ ಕಾಯ್ದೆಯಡಿ ಸುಮಾರು 520 ಕೋಟಿ ರೂ. ಮೀಸಲಿಟ್ಟಿದ್ದು, 3,939 ಪರಿಶಿಷ್ಟ ಜಾತಿ ಮತ್ತು 2383 ಪರಿಶಿಷ್ಟ ಪಂಗಡದ ಒಟ್ಟು 6,322 ರೈತ ಕುಟುಂಬಗಳಿಗೆ ವಿದ್ಯುತ್ ಸಂಪರ್ಕದೊಂದಿಗೆ ಕೊಳವೆಬಾವಿ ಸೌಲಭ್ಯ ಒದಗಿಸಲು ನೀಡಿರುವ ಅನುಮೋದನೆಯ ಪ್ರಗತಿಯ ಬಗ್ಗೆ ಪರಿಶೀಲಿಸಲಾಯಿತು.

??2025?26ನೇ ವರ್ಷದಲ್ಲಿ ಎಸ್‌ಸಿಪಿ?ಟಿಎಸ್‌ಪಿ ಕಾಯ್ದೆಯಡಿ ಕೊಳವೆಬಾವಿಗಳ ಜೊತೆಗೆ ಅಂತರ್ಜಲ ಅಭಿವೃದ್ಧಿಗೊಳಿಸುವ ದೃಷ್ಟಿಯಿಂದ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಕೃಷಿ ಪ್ರದೇಶದಲ್ಲಿ ಜಲ ಸಂರಕ್ಷಣಾ ರಚನೆಗಳ (ಚೆಕ್ ಡ್ಯಾಮ್ , ಸಾಮೂಹಿಕ ಏತ ನೀರಾವರಿ ಯೋಜನೆ) ನಿರ್ಮಾಣ ಕಾರ್ಯಕ್ಕೆ ನೀಡಿರುವ ಆದ್ಯತೆಯ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಲಾಯಿತು. ?ಪ್ರಸ್ತುತ ಸಾಲಿನ ಅನುಮೋದಿತ ಯೋಜನೆಗಳ ಅನುಷ್ಠಾನ ಚುರುಕುಗೊಳಿಸಬೇಕು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತ ಕುಟುಂಬಗಳಿಗೆ ವಿದ್ಯುತ್ ಸಂಪರ್ಕದೊಂದಿಗೆ ಕೊಳವೆಬಾವಿ ಸೌಲಭ್ಯವನ್ನು ಒದಗಿಸುವ ಕಾರ್ಯವನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸುವಂತೆ ಸೂಚಿಸಲಾಯಿತು. ಸಭೆಯಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಬಿ.ಕೆ ಪವಿತ್ರ, ಉತ್ತರ ಹಾಗೂ ದಕ್ಷಿಣ ವಲಯದ ಮುಖ್ಯ ಅಭಿಯಂತರರು ಉಪಸ್ಥಿತರಿದ್ದರು.

# ಉತ್ತಮ ಆರೋಗ್ಯಕ್ಕಾಗಿ ವೈಯುಕ್ತಿಕವಾಗಿ ನದಿ ಪರಿಸರವನ್ನು ಮಾಲಿನ್ಯಗೊಳಿಸದಂತೆ ಜಾಗೃತರಾಗೋಣ: ಹಂಪಯ್ಯನಾಯಕ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಟಿ.ಎ.ಪಿ.ಸಿ.ಎಂ.ಎಸ್. ಬಯಲು ಜಾಗದಲ್ಲಿ ರಾಷ್ಟ್ರೀಯ ಸ್ವಾಭಿಮಾನ ಆಂದೋಲನ ನವದೆಹಲಿ ಹಾಗೂ ಪರ್ಯಾವರಣ ಟ್ರಸ್ಟ್ ಶಿವಮೊಗ್ಗ,ನಿರ್ಮಲ ತುಂಗಭದ್ರಾ ಅಭಿಯಾನ ಸಮಿತಿ ಸಂಯುಕ್ತಾಶ್ರಯದಲ್ಲಿ ನಡೆದ ನಿರ್ಮಲ ತುಂಗಭದ್ರಾ ಅಭಿಯಾನ 3 ನೇ ಹಂತದ ಜಲಜಾಗೃತಿ-ಜನಜಾಗ್ರತಿ ಪಾದಯಾತ್ರೆ ಕಾರ್ಯಕ್ರಮವನ್ನು ಶಾಸಕ ಹಂಪಯ್ಯನಾಯಕ ಉದ್ಘಾಟಿಸಿ ಮಾತನಾಡಿ ನಮ್ಮ ನಾಡಿನ ನದಿಗಳು ಜನರಿಗೆ ಜಾನುವಾರುಗಳಿಗೆ, ಪ್ರಾಣಿ, ಪಕ್ಷಿಗಳಿಗೆ ಜೀವಜಲವನ್ನು ನೀಡುವುದರೊಂದಿಗೆ ನಮ್ಮೆಲರಿಗೂ ಮುಖ್ಯವಾಗಿ ಆಗತ್ಯವಾಗಿರುವ ಕೃಷಿ ಆಹಾರದ ಉತ್ಪದಾನೆಗೆ ಕೂಡ ನೀರನ್ನು ನೀಡುತ್ತವೆ ...**



ನಮ್ಮ ರಾಜ್ಯದ ಜೀವನಾಡಿಯಾಗಿರುವ ತುಂಗಭದ್ರ ನದಿಗೆ ನಾವು ನಿತ್ಯ ಪಟ್ಟಣಗಳ ತ್ಯಾಜ್ಯ, ಕೈಗಾರಿಕೆಗಳ ತ್ಯಾಜ್ಯವನ್ನು ಹರಿಸುವ ಮೂಲಕ ನದಿಯ ನೀರನ್ನು ಕಲುಷಿತಗೊಳಿಸಿ ಇಂದು ನದಿಗಳ ನೀರನ್ನು ಕುಡಿಯುವುದನ್ನು ಕೂಡ ಯೋಗ್ಯವಾಲ್ಲದ ಹಾಗೆ ಮಾಡಿಕೊಂಡಿದ್ದೇವೆ ಅದ್ದರಿಂದ ಸರ್ಕಾರದ ಜೋತೆಗೆ ನಾವು ಕೂಡ ವೈಯುಕ್ತಿಕವಾಗಿ ನದಿ ಪರಿಸರವನ್ನು ಮಾಲಿನ್ಯಗೊಳಿಸದಂತೆ ಉತ್ತಮ ಆರೋಗ್ಯಕ್ಕಾಗಿ ನದಿಯ ನೀರನ್ನು ಶುದ್ದವಾಗಿರುವಂತೆ ನೋಡಿಕೊಳ್ಳುವ ಜವಾಬ್ದರಿ ಕೂಡ ಪ್ರತಿಯೊಬ್ಬರಾದಾಗಿದ್ದು ,ನಿರ್ಮಲ ತುಂಗಭದ್ರಾ ಅಭಿಯಾನ ಸಮಿತಿ ಯು ಜನರಲ್ಲಿ ಜಾಗೃತಿಯನ್ನು ಮೂಡಿಸುತ್ತಿದೆ ಎಂದು ತಿಳಿಸಿದರು. ರಾಷ್ಟ್ರೀಯ ಸ್ವಾಭಿಮಾನ ಆಂದೋಲನ ಸಮಿತಿಯ ರಾಷ್ಟ್ರೀಯ ಅಧ್ಯಕ್ಷರಾದ ಬಸವರಾಜ್ ಪಾಟೀಲ್ ವೀರಾಪುರ ಮಾತನಾಡಿ ವಿಶ್ವ ಸಂಸ್ಥೆಯು ನಮ್ಮ ದೇಶದಲ್ಲಿನ 80 ನದಿಗಳು ಅಪಾಯದಲ್ಲಿರುವುದನ್ನು ಗುರುತಿಸಿ ಕೇಂದ್ರ ಸರ್ಕಾರಕ್ಕೆ ವರದಿಯನ್ನು ನೀಡಿದ್ದೆ.

ಪಶ್ಚಿಮಘಟದಲ್ಲಿ ರಾಜ್ಯದ ಬಹುತೇಕ ನದಿಗಳು,ತುಂಗ,ಭದ್ರೆ,ಶರವಾತಿ,ನೇತ್ರವಾತಿ ನದಿಗಳ ಉಗಮ ಸ್ಥಾನವಾಗಿದ್ದಾರು ಕೂಡ ಸರ್ಕಾರ ಅಂತಹ ಸೂಕ್ಷ ?ಮ ಪ್ರದೇಶವಾದ ಪಶ್ಚಿಮ ಘಟಗಳ ಮೇಲೆ ಅಭಿವೃದ್ದಿಯ ಹೆಸರಿನಲ್ಲಿ ಮೀತಿ ಮೀ-ರಿದ ಒತ್ತಾಡ ಹಾಕುತ್ತಿರುವುದರಿಂದ ಹಾಗೂ ನದಿಗೆ ಜಲಾಶಯ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಚೆಕ್ ಡ್ಯಾಂ ಗಳನ್ನು ನಿರ್ಮಾಣ ಮಾಡುತ್ತಿರುವುದರಿಂದ ನದಿಗಳಲ್ಲಿನ ಕನಿಷ್ಟ ಹರಿವಿನ ಪ್ರಮಾಣ ಕೂಡ ಕಡಿಮೆಯಾಗಿರುವುದರಿಂದ ನದಿಗಳಲ್ಲಿ ಮಾಲಿನ್ಯ ಹೆಚ್ಚಾಳಕ್ಕೆ ಕಾರಣವಾಗುತ್ತಿದೆ.ನಾಸ ಉಪಗ್ರಹ ಚಿತ್ರದ ವರದಿಯಂತೆ 2040 ರಲ್ಲಿ ತುಂಗಭದ್ರೆ ನದಿಯಿಂದ ಕುಡಿಯುವುದಕ್ಕೆ ಮಾತ್ರ ನೀರು ಪಡೆಯುವುದಕ್ಕೆ ಸಾಧ್ಯವಾಗಲಿದೆ ಎಂದು ವರದಿ ತಿಳಿಸುತ್ತದೆ.

..ನಮ್ಮ ಕೃಷಿಗೆ ನೀರು ದೊರೆಯುವುದು ಕೂಡ ಕಷ್ಟವಾಗಲಿದೆ.ತುಂಗಭದ್ರ ನದಿ ರಾಜ್ಯದ 9 ಜೀಲ್ಲೆಗಳಲ್ಲಿ ಹರಿದು ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಜೋಗುಳಾಂಬೆ ಪುಣ್ಯಕ್ಷೇತ್ರದಲ್ಲಿ ಕೃಷ್ಣ ನದಿಯೊಂದಿಗೆ ಕೂಡಿಕೊಂಡು ಹರಿಯುತ್ತಾಳೆ . ಕಡಿನ ವನಚೇದ ಶೇ33 ರಷ್ಟು ಇದ್ದಾಗ ಮಾತ್ರ ನಮಗೆ ಪ್ರಾಣವಾಯು ದೊರೆಯುವುದಕ್ಕೆ ಸಾಧ್ಯ ಅದ್ದರಿಂದ ನಾಡಿನ ಧರ್ಮಗುರುಗಳು, ರಾಜ-ಕೀಯ ಧುರೀಣರು, ವಿಜ್ಞಾನಿಗಳು,ಪರಿಸಾರ ಪ್ರೇಮಿಗಳು,ಸಮಾಜದ ಎಲ್ಲಾ ವರ್ಗದವರು ,ರೈತರು,ಕೈಗಾರಿಕೋದ್ಯಮಿಗಳು ನದಿಗಳ ಸಂರಕ್ಷಣೆಗೆ ಮುಂದಾಗಬೇಕಾಗಿದೆ ರಾಷ್ಟ್ರೀಯ ಸ್ವಾಭಿಮಾನ ಆಂದೋಲನ ಸಮಿತಿಯ ವತಿಯಿಂದ ದಕ್ಷಿಣ ಭಾರತದ ತುಂಗಭದ್ರ ನದಿಯ ಸ್ವಚ್ಚತೆಗೆ ಮುಂದಾಗಿದ್ದೇವೆ ಅದರ ಅಂಗವಾಗಿ ಜನರಲ್ಲಿ ಜಾಗೃತಿ ಮೂಡಿಸುವ ಅಂಗವಾಗಿ, ನಿರ್ಮಲ ತುಂಗಭದ್ರಾ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದ್ದು ಶೃಂಗೇರಿಯಿಂದ ಮಂತ್ರಾಲಯದ ವರೆಗೆ 600 ಕಿ.ಮೀ.ವರೆಗೆ ಒಂದು ನದಿಗಾಗಿ ಪಾದಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

63 ನೇ ಹಂತದ ನಿರ್ಮಲ ತುಂಗಭದ್ರಾ ಅಭಿಯಾನ ಸಂಚಾಲಕರಾದ ಮಹಿಮಾ ಪಾಟೀಲ್ ಮಾತನಾಡಿದರು ದಿವ್ಯ ಸಾನಿಧ್ಯವನ್ನು ಕಲ್ಮಠ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯಶಿವಾಚಾರ್ಯ ಮಹಾಸ್ವಾಮಿಗಳು, ಕರೆಗುಡ್ಡ ಶ್ರೀ ಮಹಾಂತೇಶ್ವರ ಮಠದ ಶ್ರೀ ಮಾಹಾಂತಲಿಂಗ ಮಹಾಸ್ವಾಮಿಗಳು, ಮುಸ್ಲಿಂ ಧಾರ್ಮ ಗುರುಗಳಾದ ಸೈಯಾದ್ ಜೀಶನ್ ಖಾದ್ರಿ, ಸೈಯಾದ್ ಸಜ್ಜದ್ ಮತವಾಲೆ ವಹಿಸಿದರು. ಪ್ರೊ.ಶ್ರೀಪತಿ ಐ.ಐ.ಟಿ. ಹಾಗೂ ಆರ್ಥಿಕ ಸಲಹೆಗಾರರಾದ ಪ್ರೊ.ಕುಮಾರಸ್ವಾಮಿ ನದಿಯ ಉಳಿವಿನ ಕುರಿತು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ದಕ್ಷಿಣ ಭಾರತ ಪ್ರಮುಖರಾದ ಮಾಧವನ್, ಗಾಯತ್ರಿ, ಮಾಜಿ ಶಾಸಕರಾದ ಬಸವನಗೌಡ ಬ್ಯಾಗವಾಟ, ರಾಜಾ ವೆಂಕಟಪ್ಪ ನಾಯಕ, ಗಂಗಾಧರನಾಯಕ, ಜಿಲ್ಲಾ ಸಂಚಾಲಕರಾದ ಎನ್. ಉದಯಕುಮಾರ ಸಾಹುಕಾರ, ತಾ.ಸಂಚಾಲಕರಾದ ಶ್ರೀಧರ ಸ್ವಾಮಿ, ಅನಿತಾನವಲಕಲ್, ಶರಣಪ್ಪಗೌಡ ನಕ್ಕುಂದಿ, ಜಗದೀಶ ಓತ್ತೂರ್, ಸೇರಿದಂತೆ ಪಟ್ಟಣದ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು, ವಿವಿಧ ಸಂಘ ಸಂಸ್ಥೆಗಳ ಮುಖಂಡರು ಭಾಗವಹಿಸಿದರು. ಪಟ್ಟಣದ ಧ್ಯಾನ ಮಂದಿರದಿಂದ ಪ್ರಮುಖ ಬೀದಿಗಳಲ್ಲಿ ವೀರಗಾಸಿ ಕಲಾವಿದರು,ಡೋಳ್ಳು ಕುಣಿತ,ಸೇ-ರಿದಂತೆ ವಿವಿಧ ಜನಪದ ಕಲಾವಿದರೊಂದಿಗೆ ಟಿ.ಎ.ಪಿ.ಸಿ.ಎಂ.ಎಸ್. ಬಯಲು ಜಾಗದ ವರೆಗೆ ನಡೆದ ನಿರ್ಮಾಲ ತುಂಗಭದ್ರ ಅಭಿಯಾನ ಜಲಜಾಗೃತಿ-ಜನಜಾಗೃತಿ ಪಾದಯಾತ್ರೆಯಲ್ಲಿ ಸಾವಿರಾರು ಜನರು ಭಾಗವಹಿಸಿದರು.